
ಅಪರಂಜಿ




ತಿಳಿನಗೆಯ ಕಾರಂಜಿ

- ಆನಂದ್
- ವಿ. ಜಿ. ಭಟ್ಟ
- ನಳಿನೀಪ್ರಿಯ
- ಅರುಣ್ ಟಿ.ಕೆ.
- ಎಚ್. ಡುಂಡಿರಾಜ್
- ಶಿವು
- ಡಾ॥ ಹೆಚ್. ವಿ. ಚಂದ್ರಶೇಖರ್
- ಬಿ. ನಾಗೇಂದ್ರ
- ಬಿ. ಎಸ್. ಚಂದ್ರಶೇಖರ್
- ರಂಗಣ್ಣ
- ಅಪ್ರಸ್ತು
- ಡಾ॥ ರವೀಂದ್ರ
- ಸೋಮಿ
- ನಂದಕಿಶೋರ

ಸಂಪುಟ–
ಸಂಚಿಕೆ–
ನಂವಬರ್–8

ಬಿಡಿಪ್ರತಿ :
ಕೇವಲ ಒಂದೂವರೆ ರೂಪಾಯಿ



ಅಪರಂಜಿ

ಗೌರವ ಸಲಹೆಗಾರರು :
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ ರೂ. 15–00
ಬಿಡಿ ಪ್ರತಿ ;—ಒಂದೂವರೆ ರೂಪಾಯಿ

ಎರಡು ಮಾತು

ಕಳೆದ ಅಕ್ಟೋಬರಿನಲ್ಲಿ ಚಂದಾನೀಡಿದ ಅಪರಂಜಿ ಬಂಧುಗಳೆಲ್ಲರಿಗೂ ಚಂದಾ ನವೀಕರಿಸಲು ವಿನಂತಿ ಪತ್ರಗಳನ್ನು ಪ್ರತ್ಯೇಕವಾಗಿ ಕಳಿಸಿದ್ದೇವೆ. ಹಲವೊಮ್ಮೆ ಈ ಪತ್ರಗಳು ವಿಳಂಬವಾಗಿ ಸೇರಿದರೂ, ಈ ಮೂಲಕ ಚಂದಾ ನವೀಕರಿಸಲು ಜ್ಞಾಪಿಸುತ್ತಿದ್ದೇವೆ.

ಹಾಸ್ಯ ಲೇಖನಗಳು, ಚುಟಕಗಳು, ಕವನಗಳು ಹಾಗೂ ವ್ಯಂಗ್ಯ ಚಿತ್ರಗಳು, ಇವುಗಳಿಗೆ ಅಪರಂಜಿಯಲ್ಲಿ ಸದಾ ಸ್ವಾಗತ. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಉಂಟು. ಅಗತ್ಯವಾಗಿ ನಿಮ್ಮ ಲೇಖನಗಳನ್ನು ಕಳಿಸಿ.

ಶಿವಕುಮಾರ್
ಸಂಪಾದಕ

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ
ಬೆಂಗಳೂರು–560 003.

ಈ ಸಂಚಿಕೆಯಲ್ಲಿ ....

ಲೇಖನ	ಲೇಖಕ/ಲೇಖಕಿ	ಪುಟ
ಅಪರಂಜಿ ಕಡಿ	ಆನಂದ್	4
ಹೃದಯ ಶೋಧನೆ	ವಿ. ಜಿ. ಭಟ್ಟ	6
ಸತ್ಯಂ ಬ್ರೂಯತ್ ಇತ್ಯಾದಿ	ನಳಿನೀಪ್ರಿಯ	7
ಕ್ರಿ.ಶ. 2630ರ ವಾರ್ತೆ	ಅರುಣ್ ಟಿ. ಕೆ.	9
ಸವಿಮಾತು	ಎಚ್. ಡುಂಡಿರಾಜ್	11
Writingಗಿಗೂ Rationing ಬಂದರೆ ?	ಡಾ|| ಹೆಚ್. ವಿ. ಚಂದಶೇಖರ್	12
Basic ಮಾರ್ಗದರ್ಶನ	ಶಿವು	15
ನಮ್ಮ ಮಕ್ಕಳನ್ನು ತಿದ್ದಲು ಸಾಧ್ಯವೇ ?	ಬಿ. ನಾಗೇಂದ್ರ	17
ಉಪಕತೆಗಳು	ಬಿ. ಎಸ್. ಚಂದ್ರಶೇಖರ್	19
ಪಂಚತಾರಾ ರಂಗಜ್ಜಿ	ರಂಗಣ್ಣ	23
ಮುಖಾಮುಖಿ–೫	ಅಪ್ರಸ್ತುತ	25
ಕರೆ	ಡಾ|| ರವೀಂದ್ರ	28
ಇಂದಾ–ಗೆ	ಸೋಮಿ	30
ಗಂಡದಿರಿಗೆ–ಸಲಹೆಗಳು	ನಂದಕಿಶೋರ	32

ವ್ಯಂಗ್ಯ ಚಿತ್ರಗಳು ಅಶ್ವಥ್

ಮುದ್ರಣ ಇಂಪ್ರೆಷ್ಸ್, ಮಲ್ಲೇಶ್ವರಂ ದೂರವಾಣಿ: 362989, 363444



ಅಪರಂಜಿ

ಸಂಪುಟ ೩ | ನವೆಂಬರ್ ೮೫ | ಸಂಚಿಕೆ ೨

ಸತ್ ಎಂದರೇನು ? ಪ್ರಾಣಗಳು ಇಂದ್ರಿಯಗಳಿಗಿಂತ ಬೇರಾದ ಇರವು ಸತ್
ಅದೇ ಇರುವುದು ಪ್ರಾಣೇಂದ್ರಿಯಗಳಲ್ಲ. ಸತ್ ಎಂದರೆ ಇದೇ.

ಪ್ರಾಣಗಳು ಮತ್ತು ಇಂದ್ರಿಯಗಳು ನಿಜವಲ್ಲ. ಆದರೆ ಪ್ರತ್ಯಕ್ಷ, ಅನುಮಾನಗಳೆರಡೂ ನಮ್ಮ ವ್ಯವಹಾರಕ್ಕೆ ಅತ್ಯಗತ್ಯ. ಅವನ್ನು ನಂಬಿಯೇ ನಾವು ಬಾಳುವೆಯನ್ನು (ಅಥವಾ ಬಾಳುವೆಯೆಂದು ನಾವು ಕರೆಯುವುದನ್ನು) ನಡೆಸುತ್ತಿದ್ದೇವೆ.

ಕ್ಷಣಕ್ಕೊಮ್ಮೆ ಬದಲಾಗುವುದನ್ನು ಹಿಡಿದು ನಾವು ಯಾವ ತರ್ಕವನ್ನೂ ಮಾಡಲು ಸಾಧ್ಯ ? ಆದರೆ ಅದಕ್ಕಿಂತ ವಿಭಿನ್ನವಾದ ತ್ರಿಕಾಲಾಬಾಧಿತವಾದ ಸತ್ಯವೊಂದಿದೆ ಎನ್ನುವುದೇ ನಿಜ.

ನಮ್ಮ ಸಾರ್ವಜನಿಕ ಜೀವನವನ್ನೇ ನೋಡಿ, ಹಾಗೆಯೇ ನಮ್ಮ ವೈಯುಕ್ತಿಕ ಜೀವನವನ್ನೂ ನೋಡಿ. ಅಂಕಿಸಂಖ್ಯೆಗಳು, ಖರ್ಚು ಆದಾಯ ಇವನ್ನೆಲ್ಲಾ ನೋಡಿದರೆ ನಮ್ಮ ಜೀವನ ಉತ್ತಮವಾದೀತೆ ?

ಮೂಲ ವಿಗ್ರಹವನ್ನು ಮಾರಿ ದೇವತೆಯ ಜಾತ್ರೆಯನ್ನು ಮಾಡಿದಂತಾಗುವುದಿಲ್ಲವೆ ?

ಕನ್ನಡ ರಾಜ್ಯೋತ್ಸವ, ದೀಪಾವಳಿ, ದಸರಾ ಕಾಲ ಇದು. ವಿಶ್ವಕನ್ನಡ ಮೇಳವೂ ಇದೆ. ಇದಕ್ಕೆಲ್ಲಾ ಭವನಗಳು, ನಾಟಕ, ಮನರಂಜನೆ, ಭಾಷಣ ಪತ್ರಿಕಾ ಪ್ರಚಾರಗಳು ಅಗತ್ಯ. ಆದರೆ ಕನ್ನಡ ಬಾಲಭೋಧೆ ಸರಿಯಾಗಿದೆಯೇ ? ಎಷ್ಟು ಜನ ತಪ್ಪಿಲ್ಲದೆ ಕನ್ನಡ ಬರೆಯಬಲ್ಲರು, ಓದಬಲ್ಲರು ?

ಕುಮಾರವ್ಯಾಸ ಭಾರತದ ಒಂದು "ಸಮಗ್ರ ಸಂಪಾದಿತ ಕೃತಿ ಬೇಡವೆ ? ಅವನ ಮನೆತನದಲ್ಲಿರುವ ಸುತ್ತಮುತ್ತಲಿನ ಪರಿಸರದಲ್ಲಿರುದ ಓಲೆಗರಿಗಳ ಶೋಧನೆ ಏಕೆ ನಡೆದಿಲ್ಲ ? ಮಹಾಪ್ರಾಣ ಅಲ್ಪಪ್ರಾಣಗಳ ಪರಸ್ಪರ ವಿನಿಮಯಕ್ಕೆ ಅಪ್ಪಣೆ ದೊರೆತುಬಿಟ್ಟಿದೆ ತಾನೇ ? ಬುದ್ಧಿಯೊಡನೆ ವಿವೇಕವೂ ಬೆಳೆಯಬೇಕಲ್ಲವೇ ?

ಅಪರಂಜಿ ಕಿಡಿ

—ಆನಂದ್

ಭಾರತದ ಪ್ರಯತ್ನಕ್ಕೆ ಅಡ್ಡಿಯಾದ್ದ ಬೆಳಕು !

ಶ್ರೀಲಂಕಾ—ಕ್ರಿಕೆಟ್ ಸುದ್ದಿ

ಅಂಪೈರುಗಳ ನೆರಳು ಬಿದ್ದಿರ ಬೇಕು !

* * * * *

ಪಂಜಾಬಿನಲ್ಲಿ ಅಕಾಲಿ ವಿಜಯ

—ಸುದ್ದಿ

ತೀವ್ರವಾದಿಗಳ ಉರಿಗಾಯುಗಳಿಗೆ ಬರ್ನಾಲ ?

* * * * *

ಕುದುರೆ ಮುಖದ ಕಬ್ಬಿಣ ಬಹರೇನ್‌ಗೆ

—ಪತ್ರಿಕೆ

ಈಗಲಾದರೂ ಕೊಳ್ಳುವವರು ಬಹರೇನು ? ?

* * * * *

ಆರು ಪೆನ್ ಬಾಂಬ್ ಪೋಲೀಸರ ವಶಕ್ಕೆ

—ಸುದ್ದಿ

ಖಡ್ಗಕ್ಕಿಂತ ಲೇಖಣಿ ಜೋರು !

* * * * *

ರಹಸ್ಯ ಉದ್ದೇಶದಿಂದ ಯಾರನ್ನೂ ಹೊಗಳಬಾರದು ಎಂಬ ಕಾಯದೆ ಜಾರಿಗೆ ಬರುತ್ತೆ ಎಂಬುದು ಶುದ್ಧ ಕುಹಕ !

*   *   *   *

ಸೇನಾ ಪಡೆಯಿಂದ ಪೋಲೀಸ್ ಠಾಣೆಯ ಮೇಲೆ ಧಾಳಿ

—ಕೇರಳದ ಸುದ್ದಿ

ಬೇಲಿಯೆದ್ದು ಬೇಲಿಯನ್ನೆ ಮೇಯ್ದರೆ ? ?

*   *   *   *   *



"ಅಂತರ ರಾಷ್ಟ್ರೀಯ ಟೆರರಿಸಂ ಬಗ್ಗೇನೇ ನನಗೆ ಯೋಚನೆಯಾಗಿ ಬಿಟ್ಟಿದೆ !"

ಹೃದಯ ಶೋಧನೆ

ಎ.ಜಿ, ಭಟ್ಟ
(ಲಹರಿ)

ಎಲ್ಲಿ ಹೋಯಿತು ಹೃದಯ
ಹುಡುಕಿರೋ ಹುಡುಕಿ
ಲೈಸನ್ಸು ಪರ್ಮಿಟ್ಟು ಫೈಲಿನಲಿ ನೋಡಿ
ಮೊನ್ನಿನ ಚುನಾವಣೆಯ ರದ್ದಿ ಕೆದರಾಡಿ

ಮೊನ್ನೆ ಆ ವೈಭವದ ಸಭೆಯಲ್ಲಿ ನಾನು
ಮಂಡಿಸಿರೆ ನನ್ನೊಳಗೆ ಅದು ಇದ್ದಿತೇನು ?
ಗಾಂಧೀಜಿ ಹೆಸರನ್ನು ನೂರಾರು ಸಾರಿ
ಎತ್ತಿ ಭಾಷಣೆಸುತಿರೆ ಬಿದ್ದೀತೆ ಜಾರಿ

ಅಲ್ಲಿ ಸಮತಾವಾದ ಮೇಣ್ ಪ್ರಜಾಸತ್ತೆ
ಕುರಿತು ಒದರಿದೆನಲ್ಲ ಆಗ ಅದು ಇತ್ತೇ ?

ಎಷ್ಟು ವರ್ಷಗಳಾದವೋ ಹೃದಯ ಕಳೆದು
ಇರಲಿ ಬಿಡು, ಏನಾಗಲುಂಟು ಅದ ತಿಳಿದು
ಪ್ಲಾಸ್ಟಿಕ್ಕು ಹೃದಯವನು ಕೂಡಿಸೋಣಂತೆ
ಕಳೆದ ಮಾಲಿಗೆ ಏಕೆ ಇಷ್ಟೊಂದು ಚಿಂತೆ ?

7

ಸತ್ಯಂ ಬ್ರೂಯಾತ್ ಇತ್ಯಾದಿ

—ನಳಿನೀಪ್ರಿಯ

ಸಾರ್ವಜನಿಕ ಪತ್ರ ವ್ಯವಹಾರಗಳಲ್ಲಿ. ಪತ್ರಗಳನ್ನು ನಯವಾದ ಭಾಷೆಯಲ್ಲಿ ಮುಚ್ಚಿಡುವ ಬದಲು. ಇದ್ದದ್ದನ್ನು ನೇರವಾಗಿ ಹೇಳಿಬಿಡುವಂತಿದ್ದರೆ ಹೇಗಿರುತ್ತೆಂಬುದಕ್ಕೆ ಎರಡು ನಿದರ್ಶನಗಳನ್ನು ನೀಡಿದ್ದೇವೆ. "ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್... ಹೇಳಿಕೆ ಅಕ್ಷರಶಃ ಸತ್ಯ ಅಲ್ಲವೇ ?

ಮಾನ್ಯ ಶ್ರೀಯುತ ತಿಮ್ಮಯ್ಯನವರಿಗೆ,

ಶ್ರೀ ವಿನಾಯಕ ಭಕ್ತಮಂಡಲಿಯ ಕಾರ್ಯದರ್ಶಿಯ ಸವಿನಯ ವಿಜ್ಞಾಪನೆಗಳು. ತಮಗೆ ತಿಳಿದಿರುವಂತೆ ನಮ್ಮ ವಿನಾಯಕ ಭಕ್ತಮಂಡಲಿ, ಪ್ರತಿ ವರ್ಷವೂ ಅಮೋಘವಾದ ಸೇವೆ ಮಾಡುತ್ತಿದ್ದು, ಈ ವರ್ಷವೂ ಸಹ ಹದಿನೈದು ದಿವಸಗಳ ಕಾಲ, ವಿವಿಧ ಸಂಗೀತಗಾರರುಗಳಿಂದ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಇವರ ಪ್ರಯುಕ್ತ ನಾವು ಒಂದು ವಿಶೇಷ ಸಂಚಿಕೆಯನ್ನು ಹೊರತರುವ ವ್ಯವಸ್ಥೆ ಮಾಡಿದ್ದೇವೆ. ಹೆಸರಾಂತ ದಾನಿಗಳಾದ ತಾವು ಈ ವಿಶೇಷ ಸಂಚಿಕೆಗೆ ಐನೂರು ರೂಗಳ ಉದಾರ ಜಾಹಿರಾತನ್ನು ಕೊಟ್ಟು ಶ್ರೀ ವರಸಿದ್ಧಿ ವಿನಾಯಕನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಇಂತಿ ತಮ್ಮ ವಿಶ್ವಾಸಿ,

ಲಂಬೋದಕ ರಾವ್.

ಮಾನ್ಯ ಲಂಬೋದಕರಾವ್ ಅವರಿಗೆ.

ಸಾರ್ವಜನಿಕ ರಸ್ತೆಯ ಎರಡು ತುದಿಗಳನ್ನು ಮುಚ್ಚಿ. ರಸ್ತೆಯ ಮಧ್ಯೆ ನಿಮ್ಮ ಭಕ್ತಮಂಡಲಿ ನಿರ್ಮಿಸುವ ವಿನಾಯಕ ಮಂಟಪದ ಹಿಂದಿನ ಅಡ್ಡಬೀದಿಯಲ್ಲೇ ನಮ್ಮ ಮನೆ. ನೀವು ಏರ್ಪಡಿಸುವ ಅಮೋಘ ಸಂಗೀತ ಕಾರ್ಯಕ್ರಮದ ಗಾನ ಸುಧೆಯನ್ನು ಸಾರ್ವಜನಿಕರು ಪೂರ್ಣವಾಗಿ ಅನುಭವಿಸಲೆಂದು, ಹಾಕುವ ಏಳು

ಲೌಡ್‌ಸ್ಪೀಕರುಗಳಲ್ಲಿ. ಏಳನೆಯದು ನಮ್ಮ ಮನೆಯ ಕಿಟಕಿಗೆ ಸರಿಯಾಗಿ ಎದುರಾಗಿದೆ. ಹೋದಬಾರಿ ಹದಿನೈದು ದಿನ ನಿದ್ದೆಗೆಟ್ಟು. ನಿಮ್ಮ ವಿನಾಯಕ ಸೇವೆಯಿಂದ ಚೇತರಿಸಿಕೊಳ್ಳುವ ಹೊತ್ತಿಗೆ, ಔಷಧಿಗೆ ಸುಮಾರು ಖರ್ಚಾಗಿತ್ತು. ಈ ಸಲ ನಿಮ್ಮ ಕಾರ್ಯಕ್ರಮದ ಹೊತ್ತಿಗೆ. ಮುಂಜಾಗ್ರತಾ ಕ್ರಮವಾಗಿ ಪ್ರವಾಸ ಹೊರಟಿದ್ದೇನೆ. ಕೊನೆಯದಾಗಿ ನನ್ನ ಹೆಸರು ತಿಮ್ಮಯ್ಯ ಅಲ್ಲ, ತಮ್ಮಯ್ಯ.

ಇಂತೀ ತಮ್ಮ ವಿಶ್ವಾಸಿ.

ತಮ್ಮಯ್ಯ

* * * *

ಮಾನ್ಯ ಡಾ॥ ಶ್ರೀಪತಿರಾಯರಿಗೆ

ನನ್ನ ಮಗಳು ಕುಮಾರಿ ದೇವಯಾನಿಯ "ರಂಗಪ್ರವೇಶ" ಇದೇ ತಿಂಗಳು ಹತ್ತನೆಯ ತಾರೀಖು ಶನಿವಾರ. ನಾಟ್ಯಗುರು ಶ್ರೀಯುತ ಭರತನ್ ಅವರ ಸಮ್ಮುಖದಲ್ಲಿ ಪುರಭವನದಲ್ಲಿ ಏರ್ಪಡಿಸಿದೆ. ಕಲಾಭಿಮಾನಿಗಳೂ, ಗಣ್ಯರೂ ಆದ ತಾವು ಈ ಸಮಾರಂಭಕ್ಕೆ ಬಂದು ನನ್ನಮಗಳ ಕಲಾಭ್ಯಾಸಕ್ಕೆ ಪ್ರೋತ್ಸಾಹ ಕೊಡಬೇಕೆಂದು ಬೇಡುತ್ತೇನೆ.

ಇಂತಿ.

ಶುಕ್ರಾಚಾರ್ಯ.

ಮಾನ್ಯ ಶುಕ್ರಾಚಾರರಿಗೆ,

ಈಗ್ಗೆ ಆರು ತಿಂಗಳ ಹಿಂದೆ ನಿಮ್ಮ ಮಗಳು ನಾಟ್ಯಾಭ್ಯಾಸ ಮಾಡುವಾಗ ಮೊಣಕಾಲು ಉಳುಕಿ, ನನ್ನ ಬಳಿಗೆ ಚಿಕಿತ್ಸೆಗೆ ಬಂದಿದ್ದಳು. ಆಕೆಯ ತೂಕ, ನಾಟ್ಯದ ವೇಗದೊಡನೆ ಸೇರಿದರೆ, ಭೌತಶಾಸ್ತ್ರದ ನಿಯಮದ ಪ್ರಕಾರ, ಆಕೆಯ ಮಂಡಿಗೆ ಅದೊಂದು ತಾಳಲಾಗದ ಹೊರೆಯಾಗುತ್ತದೆಂದು ಆಕೆಗೆ ಆಗಲೇ ಹೇಳಿದ್ದೆ. ಹೆತ್ತವರಿಗೆ ಹೆಗ್ಗಣ ಮುದ್ದು. ಸರಿ ಆದರೆ ಸರ್ಕಸ್ ನೋಡಿ ಆನಂದಿಸುವ ವಯಸ್ಸನ್ನು ನಾನು ಮೀರಿದ್ದೇನೆಂದು ಹೇಳಲು ವಿಷಾದಿಸುತ್ತೇನೆ"

ಇಂತೀ

ಶ್ರೀಪತಿರಾಯ.

ಕ್ರಿ.ಶ. 2630ರ ವಾರ್ತೆ

—ಅರುಣ್, ಟಿ. ಕೆ.

ಇಸವಿ :—
ಕ್ರಿಶ. 2030

ಬಾಹ್ಯಾಕಾಶ ಕೇಂದ್ರ,
ಕಾರ್ಗತ್ತಲಹಳ್ಳಿ

ವಾರ್ತೆಗಳು :—

ಓದುತ್ತಿರುವವರು :—ಕಂಪ್ಯೂಟರ್ ರೊಬೊಟ್‌ರಾಜ್ ಈಗ ಭಾರತದ ಸಮಯ ಎಂಟು ಗಂಟೆ ಮೂವತ್ತು ಪ್ಯೆ.ಕೊ ಸೆಕೆಂಡುಗಳು.

ಭಾರತದಲ್ಲಿ ಅತಿ ಹೆಚ್ಚು ಬೆಲೆ ಬಾಳುವ ವಸ್ತು ನೀರೇ ಎಂದು ಕೇಂದ್ರ ನೀರಾವರಿ ಖಾತೆ ಸಚಿವರು ತಿಳಿಸಿದ್ದಾರೆ. ಇದರಿಂದ ತಮ್ಮ ಸರ್ಕಾರ ನೀರಿಗೆ ನೀಡುತ್ತಿರುವ ಪ್ರಾಮುಖ್ಯತೆ ವ್ಯಕ್ತವಾಗಿದೆ ಎಂದು ಅವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು. ಹಾಗಾಗಿ ನೀರಿನ ಮೇಲೆ ಶೇ. 400 ರಷ್ಟು ತೆರಿಗೆ ಹೆಚ್ಚಿಸಲಾಗಿದೆ.

ಬೆಂಗಳೂರಿನ ಶ್ರೀಮಂತ ಕುಟುಂಬವೊಂದು ಪಿಕ್‌ನಿಕ್‌ಗೆ ಚಂದ್ರಗ್ರಹದ ಬಳಿ ಹೋಗಿದ್ದಾಗ ನಡೆದ ಅಸ್ಫೋಟನೆಯಲ್ಲಿ ಬೇರೆ ಗ್ರಹದವರ ಕೈವಾಡವಿದೆ ಎಂದು ತನಿಖಾ ಮೂಲಗಳು ತಿಳಿಸಿವೆ.

ಭಾರಿ ಮೊತ್ತದಲ್ಲಿ ನೀರನ್ನು ಅರಬ್ ದೇಶಗಳಿಗೆ ಕಳ್ಳ ಸಾಗಾಣಿಕೆ ಮಾಡುತ್ತಿದ್ದರೆನ್ನಲಾದ ನಾಲ್ವರನ್ನು ಬಂಧಿಸಲಾಗಿದೆ.

ಮೂರನೇ ದರ್ಜೆ ಸರ್ಕಾರಿ ನೌಕರರ ಸಂಬಳವನ್ನು ರೂ. 50,000 ದಿಂದ ರೂ. 55,000ಕ್ಕೆ ಏರಿಸಲಾಗಿದೆ ಎಂದು ರಾಜ್ಯ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ. ಇದೇ ಸಮಯದಲ್ಲಿ ವರಮಾನ ತೆರಿಗೆ ಶೇ. 100 ರಷ್ಟು ಹೆಚ್ಚಿಸದೆ ಮಾರ್ಗವಿಲ್ಲವೆಂದು ಆರ್ಥಿಕ ಸಚಿವಾಲಯದ ಪ್ರಕಟನೆ ತಿಳಿಸುತ್ತದೆ.

ನೆನ್ನೆ ಬಂದ್ ಪ್ರಯುಕ್ತ ನಗರದ ಎಲ್ಲ ಅಂಗಡಿಗಳೂ ವಾಣಿಜ್ಯ ಸಂಸ್ಥೆಗಳು ಮುಚ್ಚಿದ್ದವು. ಎಲ್ಲಾ ಅಂಗಡಿಗಳ ರೊಬೊಟ್‌ಗಳು ತಮ್ಮ ಮಾಲಿಕರ ಆಜ್ಞೆಯಂತೆ ಧರಣಿ ಹೂಡಿ, ವಿಧಾನಸೌಧಕ್ಕೆ ವೇಗವಾಗಿ ಮೆರವಣಿಗೆಯಲ್ಲಿ ತೆರಳಿ ಬೇಡಿಕೆಗಳ ಈಡೇರಿಕೆಗಾಗಿ ಮನವಿಯೊಂದನ್ನು ಮುಖ ಮಂತ್ರಿಗಳಲ್ಲಿ ಸಲ್ಲಿಸಿದವು. ನಂತರ ನಡೆದ ರೊಬೊಟ್‌ಗಳ ಗಲಭೆ ನಿಯಂತ್ರಿಸಲು ಪೋಲೀಸ್ ರೊಬೊಟ್‌ಗಳು ಎರಡು ಅಣುಬಾಂಬನ್ನು ಸಿಡಿಸಿದವು ಎಂದು ತಿಳಿದು ಬಂದಿದೆ. 100 ರೋಬಾಟ್‌ಗಳನ್ನು ರೀಪೇರಿಗೆ ಕಳಿಸಲಾಗಿದೆ—200 ರೋಬಾಟ್‌ಗಳು ಸತ್ತವು.

ಕಂಪ್ಯೂಟರ್‌ಗಳ ಹಾವಳಿಯಿಂದ, ದೂರದರ್ಶನಗಳ ಉಪಯೋಗ ಕಡಿಮೆಯಾಗಿ ಅವು ಮಾಯವಾಗುವುದನ್ನು ತಡೆಯಲು ಸರ್ಕಾರ ಯೋಚಿಸುತ್ತಿದೆ. ದೂರದರ್ಶನಗಳು ಹಿಂದಿನ ದಿನಗಳ ಅಮೂಲ್ಯ ಪಳೆಯುಳಿಕೆಗಳು. ಈಗ ತ್ರಿ–ಡಿ ದೂರದರ್ಶನ ಕೊಂಡವರಿಗೆ ಉಚಿತವಾಗಿ ರೊಬೊಟ್ ಒಂದನ್ನು ನೀಡಲಾಗುವುದು ಎಂದು ವಾಣಿಜ್ಯ ಸಂಸ್ಥೆ ಪ್ರಕಟಿಸಿದೆ.

ನಗರದ ಇಂದಿರಾಗಾಂಧಿ ಮ್ಯೂಸಿಯಂ ಮತ್ತು ಸುಭಾಷ್ ನಗರಗಳಲ್ಲಿ ರೊಬೊಟ್ ಮತ್ತು ದೂರದರ್ಶನಗಳ ಭಾರಿ ಪ್ರದರ್ಶನ ಮತ್ತು ಮಾರಾಟ ಕೇಂದ್ರಗಳನ್ನು ತೆಗೆಯಲಾಗಿದೆ.

ಇತ್ತೀಚಿನ ಪೋಲೀಸ್ ರೊಬೊಟ್‌ಗಳ ವರದಿಯಂತೆ ಸದಾಶಿವನಗರದ ಗಂಡು ರೊಬೊಟ್ ಒಂದು ಅದರ ಪಕ್ಕದ ಮನೆಯ ಹೆಣ್ಣು ರೊಬೊಟ್ ಒಂದನ್ನು ಹಾರಿಸಿಕೊಂಡು ಹೋಗಿದೆಯೆಂದು ತಿಳಿದು ಬಂದಿದೆ. ಪೋಲೀಸ್ ರೊಬೊಟ್ ದಳ ಶೋಧನೆಯಲ್ಲಿದೆ. ಇದರಲ್ಲಿ ರೊಬೊಟ್ ನಾಯಿಪಡೆ ಕೂಡ ಇದೆ.

ಕೊನೆಯಲ್ಲಿ ಹವಾಮಾನ ವಿವರ. ಹಿಂದಿದ್ದಂತೆ ಇಂದೂ ಮುಂದುವರಿಯುತ್ತೆ.

ಇಲ್ಲಿಗೆ ವಾರ್ತಾ ಪ್ರಸಾರ ಮುಗಿಯಿತು
ನಮಸ್ಕಾರ.

ಸವಿ ಮಾತು

—ಎಚ್. ಡುಂಡಿರಾಜ್

ಪ್ರೇಯಸಿಯ ಸವಿಮಾತು
ಜೇನಿಗಿಂತಲೂ ಸಿಹಿಯಾಗಿತ್ತು.
ಕೇಳುತ್ತಾ ಕೇಳುತ್ತಾ
ನನ್ನ ಎದೆ ಬಡಿತ
ಏರುತ್ತಾ ಹೋಯಿತು.
ತಡೆಯಲಾರದೆ
ಕೂಗಿ ಹೇಳಿದೆ—
"ನಿಲ್ಲಿಸು ಪ್ರಿಯೆ.
ನನಗೆ ಡಯಾಬಿಟೀಸ್ ಇದೆ.

ಅದೃಶ್ಯ

ಜೀವನದಲ್ಲಿ
ಬಹಳಷ್ಟು ಸಿನಿಮಾಗಳನ್ನು
ಕಂಡೆ.
ಬಹಳಷ್ಟು ಸಿನಿಮಾಗಳಲ್ಲಿ
ಜೀವನ
ಕಾಣಲಿಲ್ಲ.

ನಿಜ ದುರಂತ

ಸಿನಿಮಾಗಳಲ್ಲಿ
ನಾಯಕ, ನಾಯಕಿ
ಅಥವಾ ಇಬ್ಬರೂ
ಸಾಯುವುದು ದುರಂತವಲ್ಲ.
ಅವರು ಕಟ ಕಡೆಯ
ರೀಲಿನಲ್ಲಿ ಸಾಯುವುದು
ಮತ್ತು ಸತ್ತ ಮೇಲೆಯೋ
ಸಿನಿಮಾ ಮುಗಿಯುವುದು
ನಿಜವಾದ ದುರಂತ

Writingಗಿಗೂ Rationing ಬಂದರೆ ?

ಡಾ|| ಹೆಚ್. ಎ. ಚಂದ್ರಶೇಖರ್

ಬೆಳಗ್ಗೆ ಬಿಸಿಬಿಸಿ ಕಾಫಿಗಾಗಿ ಕಾಯುತ್ತಿದ್ದೆ. ದಿನದ ಹೊತ್ತಾದರು ಕಪೆಫಿ ಇರಲಿ ಕಾಫಿಯ ವಾಸನೆಯೂ ಬರಲಿಲ್ಲ. ಬರಹ ನಿಲ್ಲಿಸಿ ಲೇ......ಕಾಫೀ......ತಾರೆ ಎಂದು ಒಂದು ಕೂಗು ಹಾಕಿದೆ. ಆದೆಲ್ಲಿದ್ದಳೊ ಮಹರಾಯ್ತಿ ದುಮು ದುಮು ಗುಟ್ಟುತ್ತ ಧಡ ಧಡ ಗಡಿಗೆ ಮುಖ ಮಾಡಿಕೊಂಡು [ಕ್ಷಮಿಸಿ ಅವಳ ಮುಖ ಇರುವುದೇ ಹಾಗೆ] ಬಂದಳು ನನ್ನ Half ಅಂಗಿ, ಕೈಯಲ್ಲಿ ಕಾಫಿಪುಡಿ, ಸಕ್ಕರೆ, ಡಬ್ಬಿ ಹಿಡಿದುಕೊಂಡು ಕಾಫಿ ಅಂತೆ ಕಾಫಿ, ಎಲ್ಲಿದೇರಿ ಮನೇಲಿ ಕಾಫಿಪುಡಿ, ಸಕ್ಕರೆ ಮುಗಿದು ವಾರವಾಯ್ತು. ಹಾಲ್‌ನೋನು ಹಾಲ್ ನಿಲ್ಲಿಸಿ ವಾರಆಯ್ತು. ನೀವು ನೀವು ಅವನಿಗೆ ಮೂರು ತಿಂಗಳ ಹಣ ಕೊಟ್ಟಿಲ್ಲ. ನಾನು ನೋಡ್ತಾನೇ ಇದೀನಿ, ಇವತ್ತು ತಂದಾರು, ನಾಳೇ ತಂದಾರು ಅಂತ. ಅಕ್ಕ ಪಕ್ಕದ ಮನೆಯಿಂದ ಕಡ ತಂದು ನಿಮಗೆ ಕಾಫಿ ಒದಗಿಸಿ ನಂಗೂ ಸಾಕಾಯ್ತು. ಮನೇನಲ್ಲಿ ನೋಡಿದರೆ ಒಂದು ಸಾಮಾನು ಇಲ್ಲ Ration ತರದೆ ಎಂಟು ದಿವಸ ಆಯಿತ್ತು. ನಿಮಗೆ ಯಾವಾಗಲೂ ಊಟಕ್ಕಿಲ್ಲ ಉಪ್ಪಿನಕಾಯಿಗಿಲ್ಲದ ಹಾಳು ಸಾಹಿತ್ಯ, ಬರಹದ ಯೋಚನೇನೆ, ನಿಮ್ಮಂತವರಿಗೆ ಸಂಸಾರಾನಾದ್ರೂ ಏಕ್ರಿ. ಸರಕಾರದವರು ಅಕ್ಕಿಗೆ, ಸಕ್ಕರೆಗೆ, ಸೀಮೆಎಣ್ಣೆಗೆ ಎಲ್ಲಕ್ಕೂ Ration ತಂದ್ರು. ಸುಡುಗಾಡು ಈ ಬರಹಕ್ಕಾದರು ಯಾಕೆ Ration ತಂದಿಲ್ಲವೊ. ಎಂದು ಬ್ರೇಕಿಲ್ಲದ ಕಾರು Downನಲ್ಲಿ Speed ಆಗಿ ಓಡುವಂತೆ ಪಟಪಟ ವದರಿ Coffee ಪುಡಿ ಸಕ್ಕರೆ ಡಬ್ಬಗಳನ್ನು ಟೇಬಲ್ ಮೇಲೆ ಕುಕ್ಕಿ ಒಳಕ್ಕೆ ಹೋದಳು.

ಹೌದು Writingಗಿಗೂ Rationing ಬಂದರೆ ? ನನ್ನ ಮನಸ್ಸು ಯೋಚನಾ ಲೋಕದಲ್ಲಿ ಮುಳುಗಿತು.

ನನ್ನ ಯೋಚನಾ ಸಾಮ್ರಾಜ್ಯದಲ್ಲಿ ಸರಕಾರ Writingಗಿಗೂ Rationing ತಂದಿದೆ. ಅದರಿಂದಾಗಿ ಆಡಳಿತದಲ್ಲಿ ಬಿಗಿಕ್ರಮ ಬಂದಿದೆ. Fileಗಳೇ ಇಲ್ಲದ ಪ್ರಯುಕ್ತ "ಸರಕಾರದ ಕೆಲಸ ದೇವರ ಕೆಲಸ"ದಂತೆ ಸಲೀಸಾಗಿ ಸಾಗಿದೆ. ಏಕೆಂದರೆ ಬರಹದ ಮಿತಿ ಇರುವುದರಿಂದ ಎಲ್ಲಾ ವ್ಯವಹಾರ ಬಾಯಿ ಮಾತಿನಲ್ಲಿ. ಸರಕಾರಕ್ಕೆ ಕಡತಗಳ ವಿಲೇವಾರಿಯಾಗಲಿ, ಕಡತಯಜ್ಞದ ಸಮಸ್ಯೆಯಾಗಲಿ ಇಲ್ಲವೆ ಇಲ್ಲ.

ಪತ್ರಕರ್ತರಿಗೆ, ಸಾಹಿತಿಗಳಿಗೆ ವಿಶೇಷ ಕಾರ್ಡುಗಳ ವ್ಯವಸ್ಥೆ ಇರುವುದರಿಂದ ಮತ್ತು ಅದರಲ್ಲಿ ದಿನವೊಂದಕ್ಕೆ ಇಂತಿಷ್ಟೆ ಪದಗಳನ್ನು ಮಾತ್ರ ಬಳಸಬೇಕೆಂಬ ಮಿತಿ ಇರುವುದರಿಂದ ಅವರು ಚೆನ್ನಾಗಿ ಯೋಚಿಸಿ ಬರೆಯುವಂತಾಗಿದೆ. ಇನ್ನೊಂದು ಸಂತೋಷದ ಸಂಗತಿಯೆಂದರೆ Rationing ಬರುವ ಮೊದಲು ಮನಸ್ಸಿಗೆ ತೋಚಿದ್ದನ್ನೆಲ್ಲ ಗೀಚಿ ಕಾವ್ಯವೆಂದು ಕಳಿಸುತ್ತಿದ್ದವನಿಗೂ ತನಗಿದ್ದ ಮಿತಿಯನ್ನು ಎರಡು ದಿನದಲ್ಲಿ ಕಳೆದುಕೊಂಡು ಉಳಿದ ತಿಂಗಳನ್ನು ಕೇವಲ ಚಡಪಡಿಕೆ, ಅಸಹನೆಯಿಂದ ಕಳೆಯುವಂತಹ ಪರಿಸ್ಥಿತಿಯಿಂದಾಗಿ ಇವರಂತಹ ಸಾಹಿತಿಗಳ ಬರಹವನ್ನು ಓದಿ ಆದರಿಂದ ತಲೆನೋವಿನ ಮಾತ್ರೆಗಳನ್ನು ನುಂಗುವ ಪರಿಸ್ಥಿತಿ ತಪ್ಪಿದಕ್ಕಾಗಿ ಪತ್ರಿಕಾ ಸಂಪಾದಕರುಗಳು ಖುಷಿಯಾಗಿದ್ದಾರೆ. ಸಂಪಾದಕರಿಗೂ ಕೆಲಸ ಸುಗಮವಾಗಿ ಮಿತಿಯಾದ ಪುಟಗಳಲ್ಲಿಯೇ ಪ್ರಾಮುಖ್ಯವಾದ ಬರಹಗಳನ್ನು ಪ್ರಕಟಿಸುವುದರಿಂದ ಕೆಲಸದ ಒತ್ತಡ ತಪ್ಪಿದಂತಾಗಿದೆ.

ಹದಿನೈದು ವರ್ಷಕ್ಕಿಂತ ಕೆಳಗಿನ ಮಕ್ಕಳಿಗೂ ಮತ್ತು ಕಾಲೇಜ್ ವಿದ್ಯಾರ್ಥಿಗಳಿಗೂ ಬರಹ ಮಿತಿಯಿಂದಾಗಿ Home work. Practical record ಹಾವಳಿ ತಪ್ಪಿದಂತಾಗಿ ಮಕ್ಕಳು ಕೂಲಿಯವರಂತೆ ಭಾರ ಹೊರುವುದನ್ನು ಬಿಟ್ಟಿದ್ದರಿಂದ ಅವರ ಬೆನ್ನುಗಳು ನೆಟ್ಟಗಾಗಿದ್ದರೆ, ವಿದ್ಯಾರ್ಥಿಗಳ Record ಹಾವಳಿ ತಪ್ಪಿ ಅವರು ಜಾಲಿಯಾಗಿ ಕಾಲ ಕಳಿಯುವಂತಾಗಿದೆ.

ಪರೀಕ್ಷೆಯಂತಹ ಪ್ರಾಣಹರಣ ಸಂದರ್ಭಗಳಲ್ಲಿ ಜೀವ ಎಡಗೈಯಲ್ಲಿ ಹಿಡಿದುಕೊಂಡು ಪರೀಕ್ಷಾ ಕೂಠಡಿಗೆ ಬರುತಿದ್ದ Examination Supervisorಗಳಿಗೆ ಭೀತಿ ತಪ್ಪಿ ನಿರಾಳವಾಗಿ ಉಸಿರಾಡುವಂತಾಗಿದೆ. Strick ದೊಂಭಿ ಗಲಾಟೆಗಳು ನಿಂತು ಜನಗಳು ನಿರಾತಂಕವಾಗಿ ಜೀವಿಸುವಂತಾಗಿದೆ.

ವ್ಯಾಪಾರಿಗಳು ಮಿತ ಬರಹದಿಂದಾಗಿ ರಾಮನ ಲೆಕ್ಕ ಕೃಷ್ಣನ ಲೆಕ್ಕದ ತಾಪತ್ರಯ ತಪ್ಪಿದ್ದರೂ ಏಕೋ ಏನೋ ಎಲ್ಲರ (ವ್ಯಾಪಾರಿಗಳ) ಮುಖ ಪೆಚ್ಚಾಗಿದೆ.

Sales Tax, Income Tax ಮತ್ತು ಪೋಲಿಸ್ Departmentಗಳಲ್ಲಿ ತಮ್ಮ ಮಾಮೂಲಿಯಲ್ಲಿ ಬಹಳ ಕಡಿತವಾಗಿರುವುದರಿಂದ ಅಧಿಕಾರಿಗಳಲ್ಲಿ ಉತ್ಸಾಹ ಇಳಿದಿದೆ.

ಇನ್ನು ಗೃಹಣಿಯವರ ವಿಷಯ : ಬರಹ ಮಿತಿಯಿಂದಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕೈ ಆಡಿಸಲು, ಬೃಹತ್ತ ಕಾದಂಬರಿಗಳನ್ನು ಬರೆದು ಬೊರ್ ಹೊಡೆಸಲಾಗ

ದಿದ್ದಕ್ಕೆ ತಳಮಳದಿಂದ ತಮ್ಮ ಗಂಡಂದಿರ ಮೇಲೆ ಹರಿಹಾಯು ಪತ್ತಿದ್ದಾರೆ. ಅದರಲ್ಲಿಂತು ನನ್ನ ಹೆಂಡತಿಯಂತ "ಸಾಹಿತ್ಯ ಶಿರೋಮಣಿ" ಬಿರುದಾಂಕಿತೆಯರಿಗೆ ಬಹಳ ತೊಂದರೆಯಾಗಿದೆ. ಏಕೆ ಬೇರೆ ಉದಾಹರಣೆ. ನನ್ನ ಹೆಂಡತೀನೇ ತೆಗೆದು ಕೊಳ್ಳಿ. ಯಾವಾಗಲೂ ಕತೇ, ಕಾದಂಬರಿ, ಕವನ ಅಂತ ಬರೀತ ಮನೇ ಕೆಲಸ ತಪ್ಪಿಸಿಕೊಂಡು ಹಾಯಾಗಿರುತ್ತಿದ್ದ ಅವಳಿಗೆ ಬರಹದ ಮಿತಿಯಿಂದಾಗಿ ಮಾಡಲು ಮನೆ ಕೆಲಸಗಂಟು ಬಿದ್ದ ಸಿಟ್ಟಿನಿಂದ ಪಾತ್ರೆ ಪಡಗಗಳನ್ನು ಎತ್ತಿ ನನ್ನತ್ತ ಒಗೆಯು ತ್ತಿದ್ದಾಳೆ.

ಧಡ್, ಧಡ್ಲ್ ಶಬ್ದದಿಂದಾಗಿ ನಾನು ಇಹಲೋಕಕ್ಕೆ ಒಂದೆ ......ರ್ರೀ .. .... ಹೋಗ್ರಿ......ಬೆಳಗಾಗೆದ್ದು ಯೋಚನೆ ಮಾಡ್ತ ಕೂತ್ರೆ ಕಾಫಿ, ತಿಂಡಿ ಬರು ತ್ತೆಯೇ ? ಎದ್ದು Ration ಅಂಗಡಿಗೆ ಹೋಗಿ ಬೇಗ ಅಕ್ಕಿ ಬೇಳೆ ಸಕ್ಕರೆ, Coffee ಪುಡಿ ತೊಗೊಂಬನ್ನಿ. ಇಲ್ಲಾಂದ್ರೆ ಉಪವಾಸನೇ ಗತಿ, ಎಂದು ಟೇಬಲ್ ಮೇಲೆ ಡಬ್ಬ ಮತ್ತು ರೇಷನ್ ಕಾರ್ಡ್ ಕುಕ್ಕಿದಾಗ ನಾನು ಗಡಿಬಿಡಿಯಿಂದ "ಇಂಗು ತಿಂದ ಮಗನಂತೆ" Ration ಮಹಾ ಮಹಿಮನ ಅವತಾರ ನೆನೆಯುತ್ತಾ Ration ಅಂಗಡಿ ಕಡೆಗೆ ಹೊರಟೆ.

15

BASIC ಮಾರ್ಗದರ್ಶನ

—ಶಿವು

ಇದು ಕಂಪ್ಯೂಟರ್ ಯುಗವಂತೆ, ಮಾನವನ ಬುದ್ಧಿ ಶಕ್ತಿಯನ್ನು ಮೀರಿದ ಬುದ್ಧಿ ಶಕ್ತಿ ಕಂಪ್ಯೂ ಟರಿನಲ್ಲಿದೆ ಎಂದು ಹಲವು ತಜ್ಞರು ಹೇಳಿದರೆ ಇನ್ನು ಹಲವರು, ಬರೀ ಕೂಡುವುದು ಬಿಟ್ಟರೆ, ಅದಕ್ಕೆ ಮತ್ತೇನೂ ಬರುವುದಿಲ್ಲ, ಮಿಂಚಿನ ವೇಗದಲ್ಲಿ ಕೂಡುವ ಪೆದ್ದಂಭಟ್ಟ ಯಂತ್ರ ಅಷ್ಟೇ ಅಂತ ಹೀಯಾಳಿಸುತ್ತಾರೆ. ಹೇಗಾದರೂ ಇರಲಿ. ಈಗ ನೋಡಿ, ಎಲ್ಲಿ ನೋಡಿದರೂ, ಸ್ಕೂಲು ಕಾಲೇಜ್ ಹುಡುಗರೆಲ್ಲಾ ಪ್ರೊಗ್ರಾಂ, ರೊಟೀನ್ ಅಂತ ಹೇಳಿಕೊಂಡು ಓಡಾಡುತ್ತಿರುತ್ತಾರೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಇದ್ದ ಪ್ರೊಗ್ರಾಂ ಒಂದೇ. ಎಂ, ಜಿ. ರೋಡಿನಲ್ಲಿ ಓಡಾಡಿ, ಸಿನಿಮಾ ನೋಡಿ ಮನೆಗೆ ಹಿಂತಿರುಗುವುದು. ಇದೇ ರೊಟೀನ್ ಸಹ. ಹಾಗಾಗಿ ನಾನೂ, ಸ್ವಲ್ಪ ಮಟ್ಟಿಗಾದರೂ ಈ ಕಂಪ್ಯೂಟರಿನ ಮರ್ಮ ತಿಳಿಯಲೇ ಬೇಕು ಅಂತ ನಿರ್ಧರಿಸಿ, ಒಂದು ಸಾಯಂಶಾಲೆ (Eveing School) ಯನ್ನು ಸೇರಿದೆ.

ಅಲ್ಲಿನ ಮೊದಲ ಪಾಠದಲ್ಲೇ, ಕಂಪ್ಯೂಟರಿಗೇ ಬೇರೆ ಭಾಷೆ ಇರುತ್ತೆ ಅಂತ ಗೊತ್ತಾಯಿತು. ನನಗೆ ನೋಡಿ ಈ ಭಾಷೆ ಅಂದಾಕ್ಷಣ, ಒಂದು ರೀತಿ ಡೀಪ್ ರೂಟೆಡ್ ಹೆದರಿಕೆ, ಪೊಟ್ಟಿ. ಶ್ರೀರಾಮುಲು, ಬೆಳಗಾಂ, ಕಾಸರಗೋಡು, ಇವುಗಳ ನೆನಪುಗಳು. ಈ ಕಂಪ್ಯೋಟರ್ ಭಾಷೆ ಹೆಚ್ಚು ಪ್ರಚಲಿತವಾದರೆ, ಮುಂದೆ ಅದಕ್ಕೇ ಒಂದು ಪ್ರಾಂತ್ಯ ಕೇಳುತ್ತೇನೊ ಎಂದೆಲ್ಲಾ ಆತಂಕ.

ಪಾಠ ಸಾಗುತ್ತಲೇ ಇತ್ತು. ಈ ಕಂಪ್ಯೂಟರ್ ಭಾಷೆಗಳಲ್ಲೂ ವೈವಿಧ್ಯ. ಆಲ್ಗಾಲ್, ಬೇಸಿಕ್. ಫೊರ್ಟ್ರಾನ್ ಇತ್ಯಾದಿ. ನಮ್ಮ ಪಾಠ ಸರಣಿ ಬೇಸಿಕ್ ಭಾಷೆ ಕುರಿತದ್ದು. ಈ ಬೇಸಿಕ್ ಭಾಷೆಯಲ್ಲಿ ಹಲವು ಇಂಗ್ಲೀಷ್ ಪದಗಳನ್ನೇ ಕಂಪ್ಯೂಟರಿನ ಜೊತೆ ಸಂಭಾಷಣೆ ನಡೆಸಲು ಬಳಸುತ್ತಾರೆ. ಪಾಠ ಕೇಳುತ್ತ ಒಂದು ಅಮೋಘ ಜ್ಞಾನೋದಯವಾದ ಭಾವನೆ ಉಂಟಾಯಿತು. ಅಲ್ಲಾ, ಈ ಬೇಸಿಕ್ ಪದಗಳನ್ನು ಸರಿಯಾಗಿ ಮನನ ಮಾಡಿದರೆ. ಜೀವನದ ಹಾದಿಯಲ್ಲಿ ಆಗತಾನೇ ಕಾಲಿಡುತ್ತಿರುವ ಯುವಕ, ಯುವತಿಯರಿಗೆಲ್ಲಾ ಒಳ್ಳೇ ಮಾರ್ಗದರ್ಶನ ಸಿಗುತ್ತಲ್ಲಾ ಅಂತ ಅನ್ನಿಸಿತು.

ಈಗ ನೋಡಿ, ಬೇಸಿಕ್‌ನ ಮೊದಲ ಪದ ಸ್ಟೆಪ್ (Step). ಎಲ್ಲರಿಗೂ ಗೊತ್ತಿರುವ ಹಾಗೆ, ಸ್ಟೆಪ್ ಅಂದರೆ ಹೆಜ್ಜೆ, ಮೊದಲ ಹೆಜ್ಜೆ ಇಡುವಾಗ, ಗಮನ ವಿಟ್ಟು ಇಡಿ ಜೀವನ ಪಥ ಸುಗಮವಾಗುತ್ತೆ ಅಂತ ಇದರ ಅಂತರಾರ್ಥ.

ನಂತರದ ಪದಗಳು ನೆಕ್ಸ್ಟ್ (NEXT). ಇನ್‌ಪುಟ್ (INPUT).

ಮೊದಲ ಹೆಜ್ಜೆ ಇಟ್ಟನಂತರ. ಇನ್‌ಪುಟ್ ಇಲ್ಲದೇ ಯಾವ ಕೆಲಸವೂ ಸಾಗುವುದಿಲ್ಲ. ಇನ್‌ಪುಟ್ ಅನ್ನು ಮೇಜಿನ ಕೆಳಗಾದರೂ ನೀಡಬಹುದು. ಅಥವ ಈಗಿನ ಓಪನ್ ಪಾಲಿಸಿಯಲ್ಲಿ ಮೇಜಿನ ಮೇಲಾದರೂ ಕೊಡಬಹುದು. ಒಟ್ಟಿನಲ್ಲಿ ಯಾವ ಕಾರ್ಯ ಸಾಧಿಸಬೇಕಾದರೂ ಅಥವಾ ಕೆಲಸ ಗಿಟ್ಟಿಸಬೇಕಾದರೂ, ಮುಖ್ಯ ಹೆಜ್ಜೆ ಇನ್‌ಪುಟ್.

ಇನ್‌ಪುಟ್ ಕೊಟ್ಟು ಕೆಲಸ ಗಿಟ್ಟಿಸಿದ ಮೇಲೆ. ಮುಂದಿನ ಪದ ಗೋಟು (GOTO). ಗೋಟು ಎಂದರೆ. ಗೋಪ್ಲೇಸಸ್ ಅನ್ನುವ ಹಾಗೆ ಮುನ್ನುಗ್ಗು ಅಂತ ಭಾವಾರ್ಥ. ಕೆಲಸ ಸಿಕ್ಕಮೇಲೆ, ಧೈರ್ಯವಾಗಿ ಮುನ್ನುಗ್ಗಿ ಕೊಟ್ಟ ಇನ್‌ಪುಟ್‌ನ ಮೂರರಷ್ಟು ಗಳಿಸುವ ಹಾದಿ ನೋಡು.

ಮುಂದಿನ ಪದಗಳು, ಇಫ್ (IF), ದೆನ್ (THEN), ಸ್ಟಾಪ್ (STOP) ಇಫ್ ಅಂದರೆ ಒಂದು ಸಮಯ. ಒಂದು ಸಮಯ ವಿಜಿ ಲೆನ್ಸ್, ಸಿಬಿಐ ಇತ್ಯಾದಿ, ನಿನ್ನ ಬೆನ್ನು ಹತ್ತಿರುವ ಸುಳಿವು ಸಿಕ್ಕರೆ. ದೆನ್ ಸ್ಟಾಪ್. ತಾತ್ಕಾಲಿಕವಾಗಿ ಗಳಿಕೆಯನ್ನು ನಿಲ್ಲಿಸು ಅಂತ ಸೂಚಿಸುತ್ತದೆ. ನೋಡಿಎಷ್ಟು ವ್ಯವಹಾರಜ್ಞಾನ!

ಇದಾದ ನಂತರ ರನ್ (RUN) ಗೋಸಬ್ (GOSUB).

ಒಂದು ವೇಳೆ ಇರುವ ಜಾಗದಲ್ಲಿ ಬಿಸಿ ಜಾಸ್ತಿಯಾದರೆ. ರನ್ ಅಂದರೆ, ಬೇರೆಲ್ಲಾದರೂ ವರ್ಗ ಮಾಡಿಸಿಕೊಂಡು, ಗೋಸಬ್ ಅಂದರೆ ತಲೆ ಮರೆಸಿಕೊಳ್ಳಿ ಅಂತ ಇದರರ್ಥ. ಮುಂದೆ ಎಲ್ಲವೂ ಮಾಮೂಲು ಪರಿಸ್ಥಿತಿ (!) ಗೆ ಬಂದ ನಂತರ ರಿಟರ್ನ್ (RETURN) ಹಿಂದಕ್ಕೆ ಬಂದು ಎಂದಿನಂತೆ ಕಾರ್ಯ ನಡೆಸಿ.

ಇಷ್ಟು ಹೊತ್ತಿಗಾಗಲೇ, ಮೊದಲ ದಿನದ ಪಾಠ ಮುಗಿದಿತ್ತು. ನನಗಂತೂ ಭೋಧಿ ವೃಕ್ಷದ ಕೆಳಗೆ ಕೂತು ಎದ್ದ ಭಾವನೆ. ಈ ಕಂಪ್ಯೂಟರ್ ಭಾಷೆಯನ್ನ ಏನೆಲ್ಲಾ ಅರ್ಥ ಇಟ್ಟು ಮಾಡಿದ್ದಾರೆ. ನಮ್ಮ ದೇಶದ ಯುವ ಜನರೆಲ್ಲಾ ಇದನ್ನ ಮನಸ್ಸಿಟ್ಟು ಕಲಿತರೆ. ಖಂಡಿತಾ ದೇಶ ಉದ್ಧಾರವಾಗೋದರಲ್ಲಿ ಸಂಶಯವೇ ಇಲ್ಲ ಅಲ್ಲವೇ!

17

"ನಮ್ಮ ಮಕ್ಕಳನ್ನು ತಿದ್ದಲು ಸಾಧ್ಯವೇ?"

—ಬಿ. ನಾಗೇಂದ್ರ

ನಮ್ಮ ಮನೆಯ ತುಂಟು ಪುಟಾಣಿ : ನನ್ನ ಭಾವ್ಮೈದನ ಮಗ ನಾಲ್ಕು ವರ್ಷನ ವಿನಯ. ಅವನ ಆಪ್ತ ಸ್ನೇಹಿತರು ಪಕ್ಕದ ಮನೆಯ ಲಕ್ಕಿ, ಹಿಂದಿನ ಮನೆಯ ಟಿಂಕ. ಒಂದೊಂದೂ ಮಂಗವೇ ಸರಿ ! ಮಂಗಗಳು ಸೇರಿದರೆ, ಮೂರು ಲೋಕ ಗಳನ್ನೂ ಅಲ್ಲಾಡಿಸಬಲ್ಲವು ! ಅದು ಅವುಗಳ Joint Capacity !

ಒಂದು ಸಂಜೆ ನಮ್ಮ ಮಾವನವರ ಮನೆಯ ಹಜಾರದಲ್ಲಿ ನಾವು ನಾಲ್ಕಾರು ಹಿರಿಯರು ಸೇರಿ, ಜಗತ್ತಿನ ಗಹನವಾದ ವಿಚಾರಗಳನ್ನು ಗಂಭೀರವಾಗಿ ಚರ್ಚಿಸು ತ್ತಿದ್ದೆವು.

ಇದ್ದಕ್ಕಿದ್ದಂತೆಯೇ ಎಲ್ಲಿಂದಲೋ, ವಿನಯ, ಲಕ್ಕಿ, ಟಿಂಕರು ಕಡ್ಡಿಗಳನ್ನು ಹಿಡಿದು 'ಹೋ ! ಎಂದು ಕಿರಿಚುತ್ತಾ, ಕುಣಿಯುತ್ತಾ. ನಾವಿದ್ದೆಡೆಗೆ ಧಾವಿಸಿ ಬಂದರು ; ಬಂದು ಪಲ್ಟಿ ಹೊಡೆದರು. ವಿನಯ ಕೂಗಿ ಹೇಳಿದ "ನಾವೆಲ್ಲಾ ಚಾರ್ಲಿಗಳು !... .. ... ಲೋ ಲಕ್ಕಿ ! ಟಿಂಕ ! ಹೊಡೀರೋ ಪಲ್ಟೀನಾ !"

ಸಭೆ ಸೇರಿದ್ದ ಹಿರಿಯರಿಗೆಲ್ಲಾ ಕೊಂಚ upset ಆಯಿತು, ಅಲ್ಲಾ ! ನಮ್ಮ ಆರ್ಯರು ಹೇಳಿದ್ದರು : "ಹಿರಿಯರು session ಸೇರಿದ್ದಾಗ ಕಿರಿಯರು ಉಸಿರೂ ಆಡಬಾರದೂ ಅಂತ ! ....ನ ಪ್ರಶ್ವಸಿತವ್ಯಮ್ ಎನ್ನುತ್ತದೆ ಉಪನಿಷತ್ತಿನ ವಾಣಿ!...... ಆದರೆ. ಈಗಿನ ಮಕ್ಕಳು ....ಇಂಗಿತ ಜ್ಞಾನವಿಲ್ಲದೋವು !.... ... ಉಸಿರು ಹಾರ್ಹೋಗೋ ಹಾಗೆ ಬಡುಕೋತಾವೆ ! .... ಬರ್ತಾ ಬರ್ತಾ Generations ಉ ಹಾಳಾಗ್ತಾ ಇವೆ !" ಈ ರೀತಿಯ ಯೋಚನೆಗಳು ಹಿರಿಯರ ಮನಸ್ಸನ್ನೆಲ್ಲಾ ಕಾಡಿದವು !

ವಿನಯನ ತಾತ ಕೊಂಚ ಸಮಾಧಾನ ತೆಗೆದುಕೊಂಡು ಮಕ್ಕಳಿಗೆ ಬುದ್ಧಿವಾದ ಹೇಳಿದರು : "ಮಕ್ಕಳಿರಾ ! ವಿನಯಣ್ಣಾ ! ಲಕ್ಕೀ, ಟಿಂಕೂ ! ದೊಡ್ಡೋರು ಮಾತಾಡುತ್ತಾ ಇರುವಾಗ ಹೀಗೆ ನುಗ್ಗಿ ಗಲಾಟೆ ಮಾಡ್ಬಾರದ್ರಪ್ಪಾ......!" ಆ ಮಾತುಗಳು ಅವರ ಕಿವಿಗೇ ಬೀಳಲಿಲ್ಲ.

ವಿನಯನ ತಂದೆ : "ಲೇ, ವಿನಯ ! ತಾತ ಹೇಳಿದ್ದು ಕೇಳಿಸ್ಲಿಲ್ವೇ ?...... ಹೊರಗ್ಹೋಗಿ ಆಡಕೋ.......ಇಲ್ಲಿದ್ರೇ ಏರಡು ಬೀಳತ್ತೇ ! ಇದರಿಂದಲೂ ಯಾವ effect ಊ ಆಗಲಿಲ್ಲ.

ಪರಿಸ್ಥಿತಿ ಸುಧಾರಿಸುವ ರೀತಿಯೇ ಕಾಣ ಬರಲಿಲ್ಲ ! ಮತ್ತಷ್ಟು ಕಿರುಚಾಟ ಪಲ್ಟಿಗಳು ಹೆಚ್ಚಾದವು ! ಹಿರಿಯರೆಲ್ಲರಿಗೂ ಭಾರಿ ಕೋಪವೇ ಬಂತು ! ಮಕ್ಕಳನ್ನು ಬಡಿದು ಬುದ್ಧಿ ಹೇಳಬಾರದು ಅನ್ನುವ ಕರುಣೆಯಿಂದ ಎಲ್ಲರೂ ಅಸಹಾಯಕರಾಗಿ ಬೇಸರ ಪಟ್ಟುಕೊಂಡರು ; ಒಳಗೇ ಕುದ್ದರು !

ನನಗೂ ಕೋಪ ಬಂತು ! "ಲೋ ! ಲಕ್ಕೀ ! ಅಂತ ಒಂದು ಬಾರಿ ಗದರಿಸಿದೆ ! ಲಕ್ಕಿ ಬೆಚ್ಚಿಬಿದ್ದ, ನನ್ನ ಕಡೆ ಭಯಗ್ರಸ್ತನಾಗಿ ತಿರುಗಿ ನೋಡಿದ. ನಾನೂ ದುರದುರ ಅಂತ ಅವನನ್ನು ನೋಡಿದೆ, ನೋಡಿ, ಹೀಗೆ ಹೇಳಿದೆ : "ಅಲ್ಲವೋ ! ನಮ್ಮ ಮನೆಯ ಮಕ್ಕಳು ನಮ್ಮ ಮಾತು ಕೇಳುವುದಿಲ್ಲಾಂದ್ರೇ—ಅದು ಸರೀಕಣೋ ಅದೇನೋ understandable ಉ !.......... ನೀನೂ ನಮ್ಮ ಮಾತು ಕೇಳೋದಿಲ್ವೇನೋ ! " ಬೆಚ್ಚಿದ ಲಕ್ಕಿ ಬೆದರಿದ ಬೆದರಿ ಓಡಿದ ಬೀದಿಯ ಕಡೆಗೆ ! ಅವನ ಹಿಂದೆ. ವಿನಯ ಟಿಂಕರು "ಹೋ ! ಎನ್ನುತ್ತಾ ಓಡಿಹೋದರು !

ನಾನು ಹೆಮ್ಮೆಯಿಂದ ನೆರೆದಿದ್ದ ಹಿರಿಯರಿಗೆಲ್ಲಾ ಜಾಣ್ಮೆಯ ಪಾಠವನ್ನು ತಿಳಿಸಿ ಹೇಳಿದೆ "ದಾರಿ ತಪ್ಪಿದ ನಮ್ಮ ಮಕ್ಕಳನ್ನು ಮತ್ತೆ ದಾರಿಗೆ ತರಬೇಕಾದರೆ, ಪರರ ಮಕ್ಕಳನ್ನು ದಂಡಿಸಿರಿ ! "

ಉಪಕತೆಗಳು

ಬಿ. ಎಸ್ ಚಂದ್ರಶೇಖರ್

[ಕನ್ನಡ ತಾಯಿ ಭುವನೇಶ್ವರಿಗೆ ಯಾಕೋ ಏನೋ ಚಿತ್ರಗೀತೆಗಳ ಮೇಲೆ ಅತಿಪ್ರೇಮ. ಅದರಿಂದಾಗಿ ಕನ್ನಡ ರಾಜ್ಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ ಪೂರ್ತಿಯಾಗಿ ಕೆಟ್ಟ ಸಿನಿಮಾ ಗೀತೆಗಳನ್ನು ಇನ್ನೂ ಕಿರಿಚುವ ಆರ್ಕೆಸ್ಟ್ರಾ ಸಂಗೀತದಲ್ಲೆ ಮುಗಿಯುತ್ತದೆ. ಶ್ರೀರಾಮ, ವಿನಾಯಕರಂತೆ ಭುವನೇಶ್ವರಿಗೂ ಹರಿಕತೆ ಇಷ್ಟವಾಗಿದ್ದಿದ್ದರೆ ಈ ತಿಂಗಳು ಪೂರ್ತಿ ಎಲ್ಲಾ ಕಡೆಯಲ್ಲೂ ಕೇಳಿಸಬಹುದಾಗಿದ್ದ ಆ ಕತಾಕಲಾಪದ ಅಂಗವಾದ ಉಪಕತೆಗಳ ಕೆಲವು ಮಾದರಿಗಳನ್ನು ಕೊಡುತ್ತಿದ್ದೇವೆ].

ಶ್ರೀರಾಮನೊಂದಿಗೆ ತಾಯಿ ಸೀತಾದೇವಿಯೂ ಕಾಡಿಗೆ ಹೋಗಿದ್ದಾಳೆ. ಪಟ್ಟಣದಲ್ಲಿ ಬೆಳೆದ ಯುವತಿ ಮೊಟ್ಟಮೊದಲಿಗೆ ಆ ದಟ್ಟಕಾಡುಗಳ ಸೌಂದರ್ಯ ನೋಡಿದ್ದಾಳೆ. ಅಲ್ಲಿನ ಮರ, ಗಿಡ, ಹೂವು, ಹಣ್ಣು, ಹಕ್ಕಿ ಪಕ್ಷಿ ನೋಡಿ ಸಂತೋಷ ಪಡುತ್ತಿದ್ದಾಳೆ. ನಾವು ಕೆಲವು ನಿಮಿಷ ಆಕೆಯನ್ನು ಈ ಪ್ರಕೃತಿ ಸೌಂದರ್ಯ ನೋಡಲು ಬಿಟ್ಟು ಒಂದು ಪುಟ್ಟ ಕತೆ ಕೇಳೋಣ.

ಇದು ನಮ್ಮ ಗುರುಗಳು ನಮಗೆ ಹೇಳುತ್ತಿದ್ದ ಕತೆ. ನಿಮ್ಮಲ್ಲೂ ಬಹಳ ಜನರಿಗೆ ಈ ಕತೆ ಗೊತ್ತೇ ಇದೆ. ಒಂದು ಆಶ್ರಮದಲ್ಲಿ ಒಬ್ಬ ಸನ್ಯಾಸಿ, ಪ್ರತಿದಿನ ಬೆಳಿಗ್ಗೆ ಸ್ನಾನಮಾಡಿ ತಪಸ್ಸಿಗೆ ಕೂಡುತ್ತಾನೆ, ನಾನು, ನನ್ನದು ಎಂದು ಏನೂ ಅವನಿಗಿಲ್ಲ. ಹಾಲಿ ಪೂರ್ತಿ ಇಲ್ಲ ಅಂತಲ್ಲ ಅವನಿಗೆ ಒಂದು ಲಂಗೋಟಿಯಿದೆ. ಕ್ಷಮಿಸಿ ಒಂದಲ್ಲ ಎರಡು ಲಂಗೋಟಿಯಿದೆ. ಒಂದೇ ಒಂದಾಗಿದ್ದರೆ ನಮ್ಮ ಕತೆ ಎಡವಟ್ಟಾಗುತ್ತಿತ್ತು. ಸ್ನಾನ ಮಾಡಿದ ನಂತರ ಒಂದನ್ನು ಆಶ್ರಮದಲ್ಲಿ ಒಣಗಲು ಹಾಕಿ ಇನ್ನೊಂದನ್ನು ಧರಿಸಿ ತಪಸ್ಸು ಮಾಡುತ್ತಾನೆ, ಆ ಆಶ್ರಮದಲ್ಲ ಹೇಗೋ ಒಂದು ಇಲಿಸೇರಿಕೊಂಡಿದೆ. ಸನ್ಯಾಸಿಯ ಲಂಗೋಟಿಯನ್ನು ಕಡಿಯುತ್ತದೆ. ಸನ್ಯಾಸಿಗೆ ಹೀಗೆ ಲಂಗೋಟಿ ಕಡಿದು ಹಾಕಿದರೆ ಮುಂದೇನು ಅಂತ ಯೋಚನೆಯಾಗುತ್ತದೆ. ಯಾರೊ ಸನ್ಯಾಸಿಗೆ ಸಲಹೆ ಕೊಡುತ್ತಾರೆ ಬೆಕ್ಕು ಸಾಕಿ ಅಂತ. ಪಾಪದ ಸನ್ಯಾಸಿ ಬೆಕ್ಕು ತಂದ. ಅದಕ್ಕೆ ಹಾಲು ಬೇಕಲ್ಲ. ಹಸು ತಂದ. ಆ ಹಾಲನ್ನು ಕರೆಯಲು ಒಬ್ಬರು ಬೇಕಲ್ಲ. ಹೆಂಡತಿ ತಂದ. ಸನ್ಯಾಸಿ ಸಂಸಾರಿಯಾದ.

ಸೀತಾಕಾಂತಸ್ಮರಣೆ – ಜಯ ಜಯರಾಮ.

ಈ ಕತೆ ನಮ್ಮ ಗುರುಗಳು ಹೇಳಿದಾಗ ನಮಗೆ ಬುದ್ಧಿ ಸರಿಯಾಗಿ ಬೆಳೆದಿರಲಿಲ್ಲ. ಈಗ ಬೆಳೆದಿದೆ ಅಂತ ಹೇಳಲ್ಲ. ಇರಲಿ. ಆದರೆ ನನ್ನ ಮೊಮ್ಮಗಳಿಗೆ ಈ ಕತೆ ಹೇಳುತ್ತಿದ್ದೆ. ಆಗ ಅವಳು ಕೇಳಿದಳು–ಆಮೇಲಾದರೂ ಬೆಕ್ಕು ಇಲಿ ತಿಂತೆ ? ಸನ್ಯಾಸಿಯ ಲಂಗೋಟಿ ಉಳಿಯಿತೆ ಅಂತ. ಈಗಿನ ಕಾಲದಲ್ಲಿ ಮಕ್ಕಳಿಗೆ ಬಹಳ ಬುದ್ಧಿ ನೋಡಿ. ಸ್ವಲ್ಪ ಯೋಚನೆ ಮಾಡಿದ ಮೇಲೆ ನಮಗನ್ನಿಸಿತು ಹಾಲು ಕುಡಿದು ಅಭ್ಯಾಸವಾಗಿರುವ ಬೆಕು ಇಲಿ ಹಿಡಿಯುವ ಕಷ್ಟಕ್ಕೆ ಹೋಗಿರುವುದಿಲ್ಲ. ಸನ್ಯಾಸಿ ಸಂಸಾರಿಯಾದದ್ದರಿಂದ ಅವನ ಲಂಗೋಟಿಗೆ ಆಗುತ್ತಿದ್ದ ಜಖಂ ತಪ್ಪಲಿಲ್ಲ ಅಂತ.

ಈ ಕತೆ ಏಕೆ ಹೇಳಕ್ಕೆ ಬಂದನಪ್ಪ ಅಂದರೆ ಯಾವುದೋ ಒಂದು ರಾಜ್ಯ. ಅದರ ಹೆಸರು ಇಲ್ಲಿ ಹೇಳುವುದು ಬೇಡ. ಅಲ್ಲಿ ಶಾಲಾ ಮಕ್ಕಳಿಗೆ ಸರ್ಕಾರ ಅಚ್ಚು ಮಾಡುತ್ತಿದ್ದ ಪುಸ್ತಕಗಳನ್ನು ಖಾಸಗೀ ಅಂಗಡಿಯವರು ಮಾರುತ್ತಿದ್ದರು. ಆ ಅಂಗಡಿಯವರಿಗೆ ನಾಲ್ಕು ಕಾಸು ಸಂಪಾದನೆ. ಆದರೆ ಈ ನಾಲ್ಕು ಕಾಸು ನೋಡಿ ಯಾರದೋ ಕಣ್ಣು ಕೆಂಪಾಯಿತು. ಇನ್ನು ಮೇಲೆ ನಿಮಗೆ ನಾಲ್ಕು ಕಾಸು ಕೊಡೋಲ್ಲ ಮೂರೇ ಕಾಸು ಕೊಡುತ್ತೇವೆ ಅಂದರು. ಅಂಗಡಿಯವರು ಒಪ್ಪಲಿಲ್ಲ. ಪುಸ್ತಕ ಪ್ರಿಂಟ್ ಮಾಡಿದವರು ನಾವೇ ಅಂಗಡಿ ಇಡುತ್ತೇವೆ ಅಂದರು. ಸನ್ಯಾಸಿಯ ತರಹ ಸಂಸಾರ ಕಟ್ಟಿಕೊಂಡರು. ಈ ಅಂಗಡಿ ನಡೆಸುವುದು ಅಷ್ಟು ಸುಲಭವಲ್ಲ ಅಂತ ಗೊತ್ತಾಯಿತು. ಬುದ್ಧಿ ಉಪಯೋಗಿಸಿ ಪುಸ್ತಕ ಪುಗಸಟ್ಟೆ ಹಂಚುತ್ತೇವೆ ಅಂದರು. ಪೈಲ್ವಾನ್ ಮುಖ ಅಡಿಯಾಗಿ ಬಿದ್ದರೂ ಮೀಸೆ ಮಣ್ಣಾಗಬಾರದಲ್ಲ. ಆಮೇಲೆ ಏನಾಯಿತು ಅಂತ ನಿಮಗೇ ಗೊತ್ತಿದೆ. ಅಂಗಡಿಯವರ ಲಾಭ ಏನೋ ತಪ್ಪಿತು. ಆದರೆ ಮಕ್ಕಳಿಗೆ ಪುಸ್ತಕವೂ ಇಲ್ಲದ ಹಾಗಾಯಿತು. ಸಿಕ್ಕ ಪುಸ್ತಕ ಹೇಗಿತ್ತು ಅಂತ ಇಲ್ಲ ಕುಳಿತಿರುವ ಮಕ್ಕಳಿಗೇ ಗೊತ್ತಿದೆ. ಹಾಂ ಮಕ್ಕಳೇ ಒಂದು ನಿಮಿಷ ಭಜನೆಮಾಡಿ–ರಘುಪತಿ ರಾಘವ ರಾಜಾರಾಮ.

* * * *

ಕುಚೇಲ ಅವಲಕ್ಕಿ ಚೀಲ ಹಿಡಿದುಕೊಂಡು ಶ್ರೀ ಕೃಷ್ಣನ ಅರಮನೆಗೆ ಬರುತ್ತಾನೆ. ಆಹಾ ಎಂತಹ ಅರಮನೆ ! ಥಳಥಳ ಹೊಳೆಯುತ್ತಿದೆ. ಮುಂದೆ ದೊಡ್ಡ ತೋಟ. ಅಲ್ಲಿ ಕಾರಂಜಿ. ಮರಕ್ಕೆ ಕಟ್ಟಿರುವ ಉಯ್ಯಾಲೆ. ಬಾಗಿಲಲ್ಲೇ ನಿಂತು ತನ್ನ ಸ್ನೇಹಿತನ ಸೌಭಾಗ್ಯ ನೋಡಿ ಸಂತೋಷ ಪಡುತ್ತಾನೆ. ಆ ಸಂತೋಷದಲ್ಲಿ ಮೈ ಮರೆಯುತ್ತಾನೆ. ಅವನು ಎಚ್ಚರಗೊಳ್ಳುವುದರಲ್ಲಿ ಒಂದು ಪುಟ್ಟ ಕತೆ ಹೇಳೋಣ.

ಒಬ್ಬ ಭಾರೀ ಶ್ರೀಮಂತ. ಲಕ್ಷಾಧಿಪತಿ. ಅಲ್ಲ ಅಲ್ಲ ಈಗ ದೊಡ್ಡ ಊರಿನಲ್ಲಿ ಮುರುಕಲು ಮನೆ ಇರುವವರು ಲಕ್ಷಾಧಿಪತಿಗಳಾಗುತ್ತಾರೆ. ಈ ಶ್ರೀಮಂತ ಕೋಟ್ಯಾಧಿಪತಿ. ಹತ್ತಾರು ಅಂಗಡಿಗಳು, ಕಾರ್ಖಾನೆಗಳು, ಹೋಟೆಲ್‌ಗಳೂ– ಭಾರೀ ಉದ್ಯೋಗಪತಿ. ಇವನು ತನಗೆ ತುಂಬಾ ನಂಬಿಕೆಯಾಗಿದ್ದವನನ್ನು ಒಳ್ಳೇ ಸಂಬಳ ಕೊಟ್ಟು ತನ್ನ ಅನೇಕ ಉದ ಮಗಳನ್ನು ನೋಡಿಕೊಳ್ಳಲು ನೇಮಿಸಿದ್ದಾನೆ.

ಹೀಗೆಯೇ ಇರುತ್ತಿರಲಾಗಿ, ಕೆಲವು ವರ್ಷಗಳ ನಂತರ ಆ ಸಾಹುಕಾರನಿಗೆ ತನ್ನ ನಂಬಿಕೆಯುವನು ದುಡ್ಡು ತಿಂದು ಹಾಕಿದ್ದಾನೆ, ತನಗೆ ಮೋಸ ಮಾಡಿದ್ದಾನೆ ಎಂದು ಗೊತ್ತಾಗುತ್ತದೆ. ಶ್ರೀಮಂತ ಆ ನೌಕರನನ್ನು ಕರೆದು ಕೇಳುತ್ತಾನೆ– ನೋಡು ನಿನ್ನ ಮೇಲೆ ಇಷ್ಟು ನಂಬಿಕೆಯಿಟ್ಟೆ. ನೀನು ಕೇಳಿದ ಅನುಕೂಲಗಳ ನ್ನೆಲ್ಲಾ ಕೊಟ್ಟೆ. ಆದರೂ ನೀನು ನನಗೆ ಮೋಸ ಮಾಡಿದ್ದೀಯಾ. ದುಡ್ಡು ತಿಂದು ಹಾಕಿದ್ದೀಯಾ ನಿನ್ನ ಕಾರಾಗೃಹಕ್ಕೆ ಕಳುಹಿಸಬಹುದು ಆದರೆ ಇಷ್ಟೊಂದು ಸಂಬಳ, ಇಷ್ಟೊಂದು ಅಧಿಕಾರ ಇದ್ದ ನೀನೇ ನನಗೆ ಮೋಸ ಮಾಡಿದ್ದೀಯಾ ಎಂದು ಹೊರಗಿನವರಿಗೆ ತಿಳಿದರೆ ಒಳ್ಳೆಯದಾಗುವುದಿಲ್ಲ. ನೀನು ಈ ಕೂಡಲೇ ಕೆಲಸ ಬಿಟ್ಟು ಹೋಗು ಅಂತ ಹೇಳುತ್ತಾನೆ.

ಆಗ ಆ ನೌಕರ ಉತ್ತರಿಸುತ್ತಾನೆ–ಸ್ವಾಮಿ ನೀವು ಹೇಳಿದ್ದು ನಿಜ. ನಾನು ನಿಮ್ಮ ಹಣ ನುಂಗಿದ್ದೇನೆ. ಎರಡು ಬಂಗಲೆ ಕಟ್ಟಿಸಿದ್ದೇನೆ. ಹೆಂಡತಿಗೆ ಒಡವೆ ಮಾಡಿಸಿದ್ದೇನೆ. ಮಕ್ಕಳಿಗೆ ಹಣ ತೆಗೆದಿಟ್ಟಿದ್ದೇನೆ. ಆದರೆ ನೀವು ನನ್ನನ್ನು ಕೆಲಸ ದಿಂದ ತೆಗೆಯುವುದು ಒಳ್ಳೆಯದೇ ನೀವೇ ಯೋಚಿಸಿ. ಈಗ ನನ್ನ ಹತ್ತಿರ ಎಲ್ಲಾ ಇದೆ. ಆದರೆ ನೀವು ಹೊಸದಾಗಿ ಕೆಲಸಕ್ಕೆ ತೆಗೆದುಕೊಳ್ಳುವವನು ಮತ್ತೆ ಮೊದಲಿ ನಿಂದ ಪ್ರಾರಂಭಿಸುತ್ತಾನೆ. ಆಗ ನಷ್ಟ ನಿಮಗೇ ಅಲ್ಲವೇ ಅಂದು.

ಹರನಮಃ ಪಾರ್ವತೀಪತೇ–ಹರಹರ ಮಹಾದೇವ.

ಈ ಕತೆ ಈಗ ಏಕಪ್ಪ ಅಂದರೆ–ನೋಡಿ ಹೋದ ಬಾರಿ ಬಹಳ ಜನ ದುಡ್ಡಿ ದ್ದೋರು ಚುನಾವಣೆಗೆ ನಿಂತುಗೊಂಡಿದ್ದರು. ಸಿನಿಮಾ ನಟರು, ಕೈಗಾರಿಕಾ ಉದ್ಯಮಿಗಳು ಮಾಜೀ ಮಹಾರಾಜರು ಅವರೆಲ್ಲಾ ಏನು ಹೇಳುತ್ತಿದ್ದರು ಅಂದರೆ ನಮ್ಮ ಹತ್ತಿರ ಈಗಲೂ ಬೇಕಾದಷ್ಟು ಹಣ ಇದೆ. ಆದ್ದರಿಂದ ನಾವು ಪ್ರಾಮಾಣಿಕ ರಾಗಿರುತ್ತೇವೆ ಅಂತ. ಆದರೆ ಮುಂಚೆ ಇವರಿಗೆ ಇಷ್ಟು ದುಡ್ಡು ಎಲ್ಲಿಂದ ಬಂತು ಅಂತ ನಾವು ಕೇಳಿಲ್ಲ.

* * * *

ಹೇಮರೆಡ್ಡಿ ಮಲ್ಲಮ್ಮನಿಗೆ ಆಕೆ ಅತ್ತೆಮಾವ ಎಂತಾ ಹಿಂಸೆ ಕೊಡುತಿದ್ದ್ರಾರೆ ಅಂದರೆ ಆ ಹೆಣ್ಣು ಮಗಳು ಕಣ್ಣೀರಿನಲ್ಲಿ ಕೈ ತೊಳಿತಾಳೆ. ಅವಳ ದುಃಖವನ್ನು ನಾವು ಒಂದು ಕ್ಷಣ ಮರೆಯೋಣ.

ಒಂದು ಕತಿ ಕೇಳ್ರಿ. ಇದು ವಿದೇಶಿ ಹೆಣು ಮಗಳ ಕತಿ ಮತ್ತೆ. ಈಗ ನಮ್ಮ ಹೆಣುಮಕ್ಕಳೂ ಪ್ಯಾಂಟ್ ಹಾಕ್ತಾರೆ. ಕೂದಲ ಕತ್ತರಿಸ್ಕೊತಾರೆ ಬಿಡ್ರಿ. ಆದರೆ ಹ್ಯಾಟ್ ಹಾಕ್ಕೊಳ್ಳುಲ್ಲ ನೀವು ನೋಡಿದೀರಲ್ರಿ ಸಿನಿಮಾದಾಗೆ, ಅದು ಎಂತ ಎಂತ ಹಾ ಟ್ ಹಾಕ್ಕೊತಾರೆ ಲೇಡೀಸ್ ಅಂತ. ಭಾರೀ ವಿಚಿತ್ರ ಇರುತ್ತೆ ಬಿಡ್ರಿ. ಮತ್ತೆ ಏನ ಪ್ಪ ಅಂದರೆ ಆ ಹ್ಯಾಟ್‌ಗೆ ನೂರು, ಸಾವಿರ ರೂಪಾಯಿ ಆಗ್ತದಂತೆ. ನಮ್ಮೂರ ಬಿಳಿ ಟೊಪ್ಪಿಗೆನೇ ಬೇಷ್ ಸುಲಭದಾಗೆ ಸಿಕುತ್ಯತಿ. ಇರಲಿ ಬಿಡ್ರಿ.

ಒಬ್ಬಳು ಹೆಣು ಮಗಳು ಇದ್ದಳು. ಅವಳು ಒಂದು ಹೊಸ ಹ್ಯಾಟ್ ಹಾಕ್ಕೊಂಡು ಬೀದೀಲಿ ಹೋಗ್ತಾಇದಾಳೆ. ಅದು ಹ್ಯಾಗಿತ್ತಪ್ಪ ಅಂದ್ರೆ ನೆತ್ತಿ ಮ್ಯಾಗ ಒಂದು ದೀಡು ಫೀಟ್ ಕೋಲು ಮೇಲೆ ಒಂದು ಬುಟ್ಟಿ. ಅದರಾಗಾ ಹವಾ, ಹಣ್ಣು. ಈ ಹ್ಯಾಟ್ ಹಾಕ್ಕೊಂಡು ಹೋಗುವಾಗ ಎಲ್ಲಾ ಇದನ್ನೇ ನೋಡೋರು ಏನು ವಿಚಿತ್ರ ಐತಿ ಅಂತ. ಈ ಹೆಣು ಮಗಳ ಗೆಳತಿ ಒಬ್ಬಳು ಧೈರ್ಯಮಾಡಿ ಕೇಳಿದಳುನೋಡು ನೀನು ಹಾಕ್ಕೊಂಡಿರೋ ಹ್ಯಾಟ್ ಚೂರೂ ಚೆನ್ನಾಗಿಲ್ಲ. ಎಲ್ಲಾರೂ ಆದನ್ನೊಡಿ ಕಸಿಕಸಿ ನಗಲಕ್ಕೆ ಹತ್ಯಾರೆ ಅಂತ.

ಆ ಹೆಣು ಮಗಳು ಹೇಳಿದಳು—ನೀನು ಹೇಳಿದ್ದು ಖರೇ. ಅದು ನನಗೂ ಗೊತ್ತು. ಮುಂಚೆ ನಾನು ಬೀದೀಲಿ ಹೋದರೆ ನೋಡು ಎಷ್ಟು ದಪ್ಪ, ಎಷ್ಟು ಅಸಂಯ ಆ ಹೆಂಗಸು ಅನ್ನೋರು. ಈಗ ಬರೀ ನನ್ನ ಹ್ಯಾಟ್ ಚೆನ್ನಾಗಿಲ್ಲ ಅಂತಾರೆ. ಅನ್ಲಿಬಿಡು.

ಕುರೂಪಿ ಅನಿಸ್ಕೊಳೊದಕ್ಕಿಂತಾ ಹ್ಯಾಟ್ ಚೆಂದಿಲ್ಲದೋಳಾ ಅನ್ನಿಸ್ಕೊ ಳೋದು ಶಾಣ್ಯಾತನ ಅಂತ ಆ ಹೆಣು ಮಗಳಿಗೆ ತಿಳಿದಿತ್ತು.

ಈ ಮಾತು ಏಕೆ ಹೇಳ್ಳಿಲಿಕ್ಕೆ ಹೆತ್ತಿದನಪ್ಪ ಅಂದ್ರೆ ನೋಡ್ರಿ ಈಗ ಎಲ್ಲರೂ ಕವಿಗಳೇ. ಹಿಂದೆ ನಾವು ಪದ್ಯ ಬರದಿದೇವೆ—ಭಾಮಿನಿ ಷಟ್ಪದೀಲೆ. ಒಂದು ನೂರು ವಚನ ಬೇರೆ ಬರದಿದೇವೆ ಅದನ್ನು ಯಾರೂ ಪ್ರಿಂಟ್ ಮಾಡುಕ್ಕೆ ಬಂದಿಲ್ಲ. ಅದು ಬಿಡ್ರಿ. ಈಗಿನ ಕವಿಗಳು ಏನಪ್ಪ ಅಂದರೆ ಪ್ರಾಸ ಇಲ್ಲ. ಅರ್ಥ ಇಲ್ಲ. ಪದ್ಯ ಬರೀತಾರೆ ಅದನ್ನು ಪುಸ್ತಕಾನೂ ಮಾಡ್ತಾರೆ. ಆದರೆ ಈ ಕವಿಗಳೂ ಶಾಣ್ಯಾ ರಿದ್ದಾರೆ. ಈ ಪದ ದ ಪುಸ್ತಕಕ್ಕೆ ಯಾರೋ ತಲೆ ಮಾಸಿದವರ ಕೈಲಿ ಮುನ್ನುಡಿ ಬರಸುತಾರೆ. ಪೇಪರ್‌ನಲ್ಲಿ ವಿಮರ್ಶೆಮಾಡೋರು ಏನು ಮಾಡ್ತಾರಪ್ಪ ಅಂದ್ರೆ— ಮುನ್ನುಡಿ ಅಸಹ್ಯವಾಗಿದೆ ಅಂತ ಬರೀತಾರೆ. ಪದ್ಯ ಕುರೂಪವಾಗಿದೆ ಅಂತ ಹೇಳೋದನ್ನ ಮರೀತಾರೆ.

23

ಪಂಚತಾರಾ ರಂಗಜ್ಜಿ

ರಂಗಣ್ಣ

ರಂಗಜ್ಜಿಗೆ ಆರು ಜನ ಮಕ್ಕಳು. ಮಕ್ಕಳಲ್ಲಿ ನಾಲ್ಕು ಜನ ಅಮೇರಿಕಾದಲ್ಲಿ ವಾಸ. ಇನ್ನಿಬ್ಬರು ಪುತ್ರಿಯರು ಉತ್ತರ ಭಾರತದಲ್ಲಿ. ಹೀಗಾಗಿ ರಂಗಜ್ಜಿಗೆ ಇವರೆಲ್ಲಾ ಬೆಂಗಳೂರಿನಲ್ಲಿ ಸೇರ್ತಾರೆ ಎಂದಾಗ ಸ್ವರ್ಗ ಮೂರೇ ಗೇಣು ಅನ್ನಿಸ್ತು. ಮಕ್ಕಳೆಲ್ಲ ಮನೆಗೆ ಬಂದು ಸೇರಿದರು. ದಿನಾ ಹರಟೆ ಗಲಾಟೆ, ವಿಧವಿಧವಾದ ತಿಂಡಿಗಳು ದಿನಾ. ಹಳೇಕಾಲದ ಸುದ್ದಿ ಸಮಾಚಾರಗಳು, ಈಚಿನ ಗಾಸಿಪ್‌ಗಳು ಎಲ್ಲಾ ವಿಶದವಾಗಿ ವಿಶ್ಲೇಷಿಸಿದರು ಮಕ್ಕಳೆಲ್ಲ.

ಆ ದಿನ ಸಂಜೆ ಮಕ್ಕಳೆಲ್ಲ ನಗರದ ಪಂಚತಾರಾ ಹೋಟೆಲಲ್ಲಿ ಪಾರ್ಟಿ ಅಂತ ನಿರ್ಧರಿಸಿದರು. ರಂಗಜ್ಜಿ "ನನಗೆ ಯಾಕೋ ಇದೆಲ್ಲ, ನಾನು ಮನೆ ನೋಡ್ಕೊಂಡಿರ್‍ತೀನಿ, ನೀವೆಲ್ಲ ಹೋಗಿಬನ್ನಿ ಅಂದಳು. ಆದರೆ ಮಕ್ಕಳಲ್ಲ ಕೇಳಬೇಕಲ್ಲ ? ಇಲ್ಲ ಅಜ್ಜಿ, ನೀನು ಬರಲೇಬೇಕು ಅಂತ ಜುಲುಂಮಾಡಿದರು. ಕೊನೆಗೆ ವಿಧಿ ಇಲ್ಲದೆ ರಂಗಜ್ಜಿ ಒಪ್ಪಿದಳು. ಆದರೆ ರಂಗಜ್ಜಿಗೆ ಸ್ವಲ್ಪ ಅನುಮಾನಇದ್ದೇ ಇತ್ತು. ನನಗೆ ಸರಿಯಾದ ಊಟ ಈ ತರದ ಹೋಟೆಲುಗಳಲ್ಲಿ ಸಿಗೋಲ್ಲ. ನನ್ನ ಪಾಡು ನಾಯಿ ಪಾಡಾಗುತ್ತೆ ಅಂತ ಯೋಚಿಸಿದಳು. ಕೊನೆಗೆ ಒಂದು ಭರಣೀ ತುಂಬ ಗೊಜ್ಜವಲಕ್ಕಿ ಮಾಡಿ ಇಟ್ಟುಕೊಂಡಳು. ಹೋಟೆಲಲ್ಲಿ ನನಗೆ ಏನೂ ಸಿಕ್ಕದೆ ಇದ್ರೆ ಇದಾದರೂ ಇರಲಿ ಅಂದುಕೊಂಡಳು.

ರಾತ್ರಿ ಎಲ್ಲ ಹೋಟೆಲಿಗೆ ಹೋದರು. ಮಕ್ಕಳ ಪಾನೀಯಗಳೆಲ್ಲ ಮುಗಿಯೋ ಹೊತ್ತಿಗೆ ಹತ್ತು ಗಂಟೆ. ಅಲ್ಲೀವರೆಗೂ ರಂಗಜ್ಜಿ ಪಂಚತಾರಾ ಹೋಟೆಲಿನ ವೈಭವ ನೋಡಿ ಬೆರಗಾದಳು. ಪಾಂಡವರು ಇದ್ದ ಅರಗಿನ ಮನೆತರಹ ಇದೆಯಲ್ಲೋ ಇದು. ಇಂಥಾ ವೈಭವ ನಾನೆಲ್ಲೂ ನೋಡಿಲ್ಲ! ಅಂತ ಮೂಗಿನ ಮೇಲೆ ಬೆರಳಿಟ್ಟಳು. ಅಲ್ಲಲ್ಲಿ ಓಡಾಡುತ್ತಿದ್ದ ವಿದೇಶಿಯರನ್ನು ನೋಡಿ ಅಜ್ಜಿಗೆ ವಿಸ್ಮಯ. ಸರಿ ಊಟಕ್ಕೆ ಮಕ್ಕಳೆಲ್ಲ ಆರ್ಡರ್ ಮಾಡಿದರು. ಅಮೆರಿಕಾದಲ್ಲಿ ಪಳಗಿದ್ದ ಮಕ್ಕಳಿಗೆ ಇನ್ನೇನು ಬೇಕು ? ಮತ್ಸ್ಯಾವತಾರ. ವರಾಹ ಇತ್ಯಾದಿ, ಇತ್ಯಾದಿ.

ಅಜ್ಜೀಗೆ ಸೌತೇಕಾಯಿ, ಟಮೆಟೋನೆ ಗತಿ ಆಯ್ತು. ಇವರ ಗುಂಪಿನ ಯೋಗ ಕ್ಷೇಮ ನೋಡ್ಕೋಕ್ಕೆ ಹೋಟೆಲಿನ ರೆಸ್ಟೋರೆಂಟ್‌ನ ಮೇಲ್ವಿಚಾರಕ ಅಲ್ಲಲ್ಲಿ ಸುಳಿದಾಡುತ್ತಿದ್ದ. ಅವನು ಮಂಗಳೂರಿನವ. ಬೊಂಬಾಯಿ, ದೆಹಲಿಗಳಲ್ಲಿ ಹೋಟೆಲ್ ಉದ ಮಗಳಲ್ಲಿ ತರಬೇತಿ ಹೊಂದಿದ್ದ. ಅವನಿಗೆ ರಂಗಜ್ಜೀ ಕಂಡು ಆಶ್ಚರ್ಯ. ಈ ಹಳೇ ಸಂಪ್ರದಾಯದ ಮುದುಕಿ ಈ ಆಧುನಿಕ ಹೋಟೆಲಿನಲ್ಲಿ ಏನು ಊಟ ಮಾಡುತ್ತೆ ಪಾಪ! ಅಂತ ಪರಿತಪಿಸಿದ. ಸ್ವಲ್ಪ ಹೊತ್ತಾದ ಮೇಲೆ ರಂಗಜ್ಜಿ ಹತ್ರ ಬಂದು ನೋಡಿದ. ಅವಳ ತಟ್ಟೇಲಿ ಈ ಹೋಟೆಲಿನಲ್ಲಿ ತಯಾರಾಗದ ವಸ್ತು ವಿಶೇಷ! ಅವನ ಕುತೂಹಲ ಕೆರಳಿತು. ರಂಗಜ್ಜಿ ಹಿಂದೆ ಬಂದು ಕನ್ನಡದಲ್ಲಿ "ನೀವೇನು ತಿಂತಾ ಇರೋದು?" ಅಂತ ಪಿಸುಗುಟ್ಟಿದ. ಅಜ್ಜಿ ಬೆಚ್ಚಿದಳು, 'ಹೊರಗಡೆ ಇಂದ ಖಾದ್ಯಗಳನ್ನು ತರಬಾರದಾಗಿತ್ತೇನೋ? ಇನ್ನೇನು ಗತಿ' ಅಂದುಕೊಂಡಳು. ಇವನ ಹತ್ತಿರ ಗುಟ್ಟೇನು ಅಂತ 'ಗೊಜ್ಜುವಲಕ್ಕಿ' ಅಂದಳು. ಮೇಲ್ವಿಚಾರಕನಿಗೆ ಬಾಯಲ್ಲಿ ನೀರೂರಿತು. ಅವನು ಮನೆಬಿಟ್ಟು ಹಲವು ವರ್ಷಗಳಾಗಿತ್ತು. ಅಮ್ಮ ಮಾಡುತ್ತಿದ್ದ ಗೊಜ್ಜುವಲಕ್ಕಿ ನೆನಪು ಬಂತು ಮೆಲ್ಲನೆ ಹೇಳಿದ 'ಅಜ್ಜಿ, ನನಗೆ ರುಚೀಗೆ ಸ್ವಲ್ಪ ಕೊಡ್ತೀರಾ?' ಅಜ್ಜಿ ಆವನಿಗೆ ಭರಣೀಲಿ ಉಳಿದದ್ದನ್ನ Napkin ಅಲ್ಲಿ ಸುತ್ತಿ ಮರೆಯಾಗಿ ಕೊಟ್ಟಳು. ಮೇಲ್ವಿಚಾರಕ ತನ್ನ ಕೊಠಡಿಗೆ ಹೋಗಿ ಅದನ್ನ ನಿಧಾನವಾಗಿ, ಬಾಯಿ ಚಪ್ಪರಿಸುತ್ತ ತಿಂದ.

ಮಕ್ಕಳ ಊಟ ಎಲ್ಲ ಮುಗೀತು. ಎಲ್ಲ ಹೊರಡಲು ತಯಾರಾದರು. ಮೇಲ್ವಿಚಾರಕ ಇವರ ಹತ್ತಿರ ಬಂದು, 'ನಿಮ್ಮ ಹತ್ತಿರ ಒಂದು ಮಾತು ಕೇಳಬಹುದೇ?' ಅಂದ. ಮಕ್ಕಳಿಗೆಲ್ಲ ಆಶ್ಚರ್ಯ! ಇದೇನು ಈ ಪ್ರಾಣಿಗೆ ರಂಗಜ್ಜಿ ಹತ್ರ ಏನು ಮಾತು ಅಂತ. ಹೋಟೆಲ್ ಮೇಲ್ವಿಚಾರಕ ಹೇಳಿದ "ಅಜ್ಜಿ ಈಗ ನೀವು ಕೊಟ್ಟ ಗೊಜ್ಜುವಲಕ್ಕಿಯ ನಳಪಾಕದ ವಿಧಾನ ನಮ್ಮ ಅಡಿಗೆಯೋನಿಗೆ ಹೇಳಿಕೊಡಿ, ಅದಕ್ಕೆ ಯಾವುದೋ ಕಷ್ಟವಾದ ಹೆಸರಿಟ್ಟು ವಿದೇಶೀಯರಿಗೆಲ್ಲ ಮಾರ್ತೀನಿ" ಅಂದ.

ಅಜ್ಜೀನೂ ಒಪ್ಪಿಕೊಂಡಳು,

ಈಗ ನಮ್ಮ ಪಂಚತಾರಾ ಹೋಟೆಲಿನ ದಿವ್ಯವಾದ ಗೊಜ್ಜುವಲಕ್ಕಿಯ ಖ್ಯಾತಿ ಎಲ್ಲ ಕಡೆಗೂ ಹರಡಿದೆ. ಸದ್ಯ ಹೋಟೆಲಿನವರಿಗೆ ಈ ಗುಟ್ಟು ಗೊತ್ತಾಗದಿದ್ದರೆ ಸಾಕು.

ಮುಖಾಮುಖಿ—೫

—ಅಪ್ರಸ್ತುತ

ಅಪರಂಜಿ ತನ್ನ ಹುಟ್ಟುಹಬ್ಬದ ಅವಸರದ ಸಡಗರದಲ್ಲಿ ಮುಂಗುರುಳು ತೀಡಿ ಕೊಳ್ಳುತ್ತಾ ಕನ್ನಡಿಯ ಮುಂದೆ ನಿಂತಿದ್ದಳು.

ಪೀಪಿ ಊದುತ್ತಾ ಅವಳ ಸಹ ಚಿಂತಕ ಅವಳ ಹಿಂದೆ ಬಂದು ನಿಂತು ಹೇಳಿದ

"ಮುಂಗುರುಳು ತೀಡಿದರೆ ಏನು ಬಂತು ? ನೀನು ಕನ್ನಡದ ಒಂದು 'ನಾನ್ ಈವೆಂಟ್'

ಅಪರಂಜಿ ಕೈಯಲ್ಲಿದ್ದ ಬಾಚಣಿಕೆ ನೆಲದ ಮೇಲಿಟ್ಟು

"ಹೌದು. ಹಾಸ್ಯಾಸ್ಪದವನ್ನೇ ಗಂಭೀರವೆಂದು ನಂಬಿದವರ ನಡುವೆ ನಾನು **non-event** ಏ" ಎಂದಳು.

"ನೀನು ನಗು ಸರಸಿಯಾಗಬೇಕು. ಎಂದ ಹುಡುಗ.

"ನಾನು ನನ್ನ ಅವಸ್ಥೆಯನ್ನು ನೆನೆದು ನಗುತ್ತಲೇ ಇದ್ದೇನೆ" ಎಂದಳು,

"ಏನು ಲೇಟೆಸ್ಟ್ ಜೋಕ್ ? "

"ಅಣು ಸಮರ ಆಗಲೇ ಕೂಡದು ಎಂದು ಯಾವುದೋ ನನ್ನಂತಹ ಹೇಳು ಕೇಳುವವರು ಗತಿಯಿಲ್ಲದ ಮಹಾ ಸಭೆ ಕರೆ ಕೊಟ್ಟಿದೆ.

"ಹೌದು, ಅದರಿಂದ ಏನು ಪ್ರಯೋಜನ ಕರೆಗಳು ಅಸಂಖ್ಯಾತ. ಕೇಳು ವವರೇ ಗತಿಯಿಲ್ಲ"

"ವಿಜ್ಞಾನಿಗಳು ಈ ಕೂಡಲೇ. ಅಣುಸ್ಫೋಟವನ್ನು ನಿಷ್ಕ್ರಿಯಗೊಳಿಸಬೇಕು. ವಿಕಿರಣ ಅಪಾಯವನ್ನೇ ತೊಡೆದುಹಾಕುವಂತಹ ಅ-ವಿಕಿರಣದ ಅಸ್ತ್ರವನ್ನು ಸಿದ್ಧ ಪಡಿಸಬೇಕು ಎಂದು ನಾನೂ ಕರೆಕೊಟ್ಟೆ.

“ಕೇಳುವವರು ಗತಿಯಿಲ್ಲ ಅಲ್ಲವೇ ?`”

“ಹೌದು ನನ್ನ ಕರೆಯೂ ಒಂದು **non-event**”

"ಹಾಗೆ ಹೇಳಬೇಡ, ನಿನ್ನ ಕರೆಗೆ ಓಗೊಟ್ಟು ಪಾಕಿಸ್ತಾನ ಅಣುಬಾಂಬನ್ನು ಸಿದ್ಧಪಡಿಸುತ್ತಿದೆ.”

“ರೈಟ್ ಹಾಗೆಯೇ ಪೂರ್ವ ಪ್ರಾಚ್ಯದಲ್ಲಿ ದಿನಕ್ಕೆ ಹದಿನೆಂಟು ಬಾರಿ ಕದನಗಳೂ, ಕದನ ವಿರಾಮಗಳೂ ಅಪಹರಣಗಳೂ ಆಗುತ್ತಿವೆ. ಸರಿ ಅದಕ್ಕೇನು ಮಾಡಬೇಕು ಅಂತಿ ?

ಏನಾದರೂ ಮಾಡಬೇಕಾದವರು ನಾವಲ್ಲ, ಸಂಬಂಧಿಸಿದವರು. ಅವರಿಗೆ ಕುಮ್ಮಕ್ಕು ಕೊಡುತ್ತಿರುವ ಪ್ರಜಾಪ್ರಭುತ್ವದ ಹರಿಕಾರರು. ಹಾಗೆಯೇ ನಾನೊಂದು **event** ಆಗಬೇಕಾದರೆ, ನನ್ನನ್ನು ಈವೆಂಟ್ ಮಾಡಬೇಕಾದವರು ಅದಕ್ಕೆ ಯತ್ನಿಸಬೇಕಾದವರು ಯತ್ನಿಸಲಿ. ನಾನು ಇದ್ದೇ ಬಿಟ್ಟಿದೇನೆ **Right here**”

ಪೀಪಿಯನ್ನು ಇನ್ನೊಮ್ಮೆ ಊದಿ ಹುಡುಗ ಹೇಳಿದ “ಪರಮಾಣು ಗಂಡಾಂತರ ಮನೆ ಬಾಗಿಲಿಗೆ ಬಂದಾಗಲೂ ನೀನು ಹೀಗೆ ಮಾಡಿದರೆ ಹೇಗೆ ? ಅದನ್ನು ತಪ್ಪಿಸುವಲ್ಲಿ ನಾವು ಏನಾದರೂ ಮಾಡಬೇಕಲ್ಲವೇ ?

“ಹೀಗೆ ಮಾಡಬೇಕಾದರೆ ನಾವು ಯಾರು. ನಮ್ಮ ಸ್ಥಿತಿಗತಿ ಏನು ? ನಾವು ಮಾಡಬೇಕೆಂದಿರುವುದು ಏನನ್ನು ? ನಮ್ಮ ಹಾದಿಗೆ ಕಂಟಕರಾರು ? ಅವರನ್ನು ಹೇಗೆ ಮಟ್ಟ ಹಾಕಬೇಕು ಎಂದು ಆಲೋಚಿಸುವವರು ಬೇಕು ? ”

“ಅಂಥವರು ಇಲ್ಲ ಅಂತೀಯಾ ಅಪರಂಜಿ ಹೇಳಿದಳು “ಇದ್ದಾರೆ, ಆದರೆ ಅವರು ಕರೆ ಕೊಡುತ್ತಿದ್ದಾರೆ. ಮಳೆ ಬೇಕೆಂದು ಭೀಕರ ಬರಪೀಡಿತ ಪ್ರದೇಶದ ಜನರು ಕರೆ ಕೊಡುವಂತೆಯೇ, ಕರೆ ಕೊಡುತ್ತಿದ್ದಾರೆ. ಅಪರಂಜಿ ಜೋರಾಗಿ ನಕ್ಕಳು.

ಪೀಪಿಯ ಹುಡುಗ ಹೇಳಿದ “ತನ್ನ ಜೋಕಿಗೆ ತಾನೇ ನಗುವುದು ಕೀಳು ಅಭಿರುಚಿ”

"ಏನೂ ಮಾಡದೆ. ಅಥವ ಮಾಡುವ ಕೆಟ್ಟ ಕಸಬುಗಳೆಲ್ಲವನ್ನೂ ಮಾಡುತ್ತಾ ಕರೆಗಳನ್ನು ಕೊಡುವುದು ಉತ್ತಮ ಅಭಿರುಚಿಯೋ ?"

"ಇದು ಬಗೆ ಹರಿಯದ ತೊಡಕು. ನಾವೇನು ಮಾಡಬೇಕು ?"

"ಪರಮಾಣು ಬಾಂಬನ್ನು ತಯಾರಿಸಿದರೂ ಬಿಟ್ಟರೂ ತಪ್ಪಾಗುತ್ತದೆ. ಆದುದರಿಂದ ಪರಮಾಣು ಬಾಂಬುಗಳು ಸ್ಫೋಟಿಸದೆ ನಿಷ್ಕ್ರಿಯವಾಗುವಂತ ಸಾಧನೆಗಳನ್ನು ನಿರ್ಮಾಣ ಮಾಡಲು ಕೂಡಲೇ ಆರಂಭಿಸಬೇಕು.

"ಹೇಗೆ ?"

"ಇದು ಅತಿ ಜರೂರಾದ. ಮಾನವಕುಲದ ಉಳಿವಿಗೆ ಅತ್ಯಗತ್ಯವಾದ ಕೆಲಸ. ವಿಜ್ಞಾನಿಗಳೇ ಕೂಡಲೇ ಕಾರ್ಯಪ್ರವೃತ್ತರಾಗಿರಿ. ನಿಮ್ಮ ಬೇತಾಳಗಳನ್ನು ಮುಳ್ಳು ಮುತ್ತುಗದ ಮರಗಳಿಗೆ ತಳಿಸಿರಿ. ಲೋಕ ಕಂಟಕವಾದ ಯಾವ ಕಾರ್ಯಗಳಲ್ಲೂ ತೊಡಗದಿರಿ, ಎಂದು..........

"ಕರೆ ಕೊಡುವುದೋ ?"

"ಮತ್ತಿನ್ನೇನು, ಕೈಗಾರಿಕಾ ಕ್ರಾಂತಿ, ವಿಜ್ಞಾನದ ಸ್ಫೋಟ, ಸಾಕ್ಷರತಾ ಪ್ರಸಾರಗಳು ನಮ್ಮ ನಾಗರಿಕತೆಯನ್ನು ಇಲ್ಲಿಗೆ ತಂದಮೇಲೆ"

"ಎಲ್ಲಿಗೆ ತಂದಿವೆ ?" ಪೀಪಿ ಹುಡುಗ ಕೇಳಿಸಿದ.

"ಕರೆ ಕೊಡುವವರೆಗೆ" ಎಂದಳು ಅಪರಂಜಿ,

ಕರೆ

—ಡಾ॥ ರವೀಂದ್ರ

ಬನ್ನಿ ಕನ್ನಡಿಗರೇ
ಕನ್ನಡಮ್ಮನ ತೇರ್ರ
(ಸಂಪ್ರದಾಯದಿ ತೇರು
ಇದು ಒಂದು ಹಳೇ ಕಾರು)

ಎಳೆಯು ಬನ್ನಿ
(ಬೆಳಕು ಕಾಣುವುದಕಿನ್ನ
ಮುನ್ನ
ಈ ಪೆದ್ದ ಐದಡಿಯುವ
ಕೃತಿ ಚೋರನೊಬ್ಬ ಕದ್ದ)

ಬಡ ಕವಿಗೆ ಈ ಕೆಲಸವಾಗುವುದೆ ಯಾವುದೋ
ಡಬ್ಬಿಯಲಿ ಧೂಳು ತಿಂದಿಹ ಫಿಲಂಕಾರರೇ,
ಟೀಡೀಬಿ, ಸೇವಾಸೊಸೈಟಿಗಳ ಶೂರರೇ.
ಕನ್ನಡ ಉದ್ಧಾರಕ್ಕೆಂದು ಪುದುವಟ್ಟುಗಳ
ಕೊಟ್ಟು ಕೈಮುಗಿದಿಹ ಸ(ಗ)ವಾ (ರಮಾ) ರರೇ
ಕೆರೆ ಕಟ್ಟಿ ಕಾಲುವೆಯು ಕಟ್ಟಿ ಹೊಟ್ಟೆಯು
ಬೆಳೆಸಿ ನಿಂದಿರುವ ಧೀರರೇ
ನೀವೆಲ್ಲ ಬನ್ನಿ

ನೀವು ಬರದಿರೆ ಕಾರು ಚಲಿಸುವುದೆ ತನ್ನಿ
ನಿಮ್ಮೆಲ್ಲರೊಮ್ಮತದ ಹೃದಯದಾಶೆಗಳ
"ಕವಿ ಮನೋರಥಗಳನು" ಧೂಳು ರಸ್ತೆಯು ಮೇಲೆ
ದರದರನೆ 'ಎಳೆಯು ಬನ್ನಿ (ಕ್ಷಮಿಸಿ ಜಿ.ಎಸ್,ಎಸ್)
ಎಡರು ತೊಡರುಗಳು ಈ ಕನ್ನಡಮ್ಮನ
ತೇರನೆಳೆವಲ್ಲಿ

ಬರೆದಿರುವೆ ನಿಮ್ಮೆಲ್ಲ ಅಭಿಮಾನ
ನಿಮ್ಮ ಕೌಂಟಿನ ಮೆಲೆ ತೋರುತಿರುವಲ್ಲಿ
ಬನ್ನಿರೋ ಬನ್ನಿ
ಭುವನೇಶ್ವರಿಯ ನೀವು ಮರೆಸಿರೋ
ಮರೆಸದಿರೆ
ಮಣ್ಣ ತಿನ್ನಿ



“ಮುಂದಿನ ವಾರದಿಂದ ಇವರು ಉಪವಾಸ ಸತ್ಯಾಗ್ರಹ ಹೂಡ್ತಾರೆ. ಈಗಿನಿಂದಲೇ ಅಭ್ಯಾಸ ಮಾಡಿಸ್ತಿದೀನೀ.”

ಇಂದಾ-ಗೆ

—ಸೋಮಿ.

ಪ್ರಿಯೆ,

ನಿನ್ನ ಸುಂದರ ವದನ, ಮಂದಸ್ಮಿತ, ಇಂಪಾದ ಸವಿಜೇನಿನಂತಹ ಮಾತುಗಳು, ರಹಸ್ಯ ವಿನಿಮಯಗಳು ನನೆದೆಯಲ್ಲಿ, ಮನದಾಳದಲ್ಲಿ ನೆಲೆನಿಂತಿದ್ದವು, ಈಗ ಹಾಗೆಂದರೆ ಸುಳ್ಳಾದೀತು. ಪೇಪರಿನಲ್ಲಿ ಓದಿದ್ದೀಯಲ್ಲಾ, ನಮ್ಮ ಚೀಫ್ ಅಮಾನತಿನಲ್ಲಿಡಲ್ಪಟ್ಟಿದ್ದಾರೆ. ನನ್ನಂತಹ ಕ್ಷುದ್ರನ ಮಾತೇನು,

ನಿನ್ನೊಡನೆ ನಾನು ಹೇಳಿದ್ದು ಹೀಗೆ. ಈ ಲೋಕದ ಯಾವ ಶಕ್ತಿಯೂ ನನ್ನ ನಿನ್ನ ಪ್ರೇಮವನ್ನು ಅಲುಗಿಸಲಾರದು. ನಿಜ ಪ್ರೇಮ ಹಾಗೇ ಇದೆ. ಆದರೆ ನನ್ನ ಮನದಲ್ಲಲ್ಲ.

ನಮ್ಮ ಪರೀಕ್ಷಾಕೇಂದ್ರದ ಕೋಣೆಗೆ ಒಳಗಿನ ಬೋಲ್ಟುಗಳಿಲ್ಲ, ಕಿಟಿಕಿಯ ತಿರುಗಣೆಗಳು ಬಿಚ್ಚಿವೆ, ಪೆಟ್ಟಿಗೆಗಳೆಲ್ಲಾ ಮುರುಕು, ಕಬ್ಬಿಣದ ಬೀರು ಜಂಗು ಹಿಡಿದಿದೆ. ನಾನೇ ಝೂಡಿಸಿದರೂ ಸಾಕು ಬಾಯಿತೆರೆದು ಕೊಳ್ಳುತ್ತದೆ. ಮುಖ್ಯಸ್ಥರು ತುಂಬಾ ಸ್ಟ್ರಿಕ್ಟು ನನಗೆ ಅಪ್ಪಣೆಕೊಟ್ಟು ಮೆಮೋ ಹಾಕಲೇ ಎನ್ನುತ್ತಾರೆ. ನನ್ನಂಥ ವೀರಾಧಿವೀರ ಅದಕ್ಕೆಲ್ಲಾ ಮೆಮೋ ಏಕೆ, ನಾನೆಲ್ಲಾ ನೋಡಿಕೋಳ್ಳುತ್ತೇನೆ ಎನ್ನುತ್ತೇನೆ,

ನಾಳೆ ಪರೀಕ್ಷೆ, ಇವೊತ್ತು ಮೀಟಿಂಗ್ ದುಗಿಯಿತು, ಸೂಪರಿಂಡೆಂಟರೆಲ್ಲಾ ದಕ್ಷರು ಏನ್ಹೇಳ್ತಿರಿ ಸಾ. ಹೋದ ವರ್ಷ ಮಾಡಿದ ಹಾಗೇ ತಾನೇ ಎನ್ನುತ್ತಾನೆ, ಹೋದ ವರ್ಷ ಈ ಸೆಂಟರಿನಲ್ಲಿ 99 % ರಿಸಲ್ಟ್ ನಾಲ್ಕೇ ಜನ ಫೇಲು—ಅವರು ಪರೀಕ್ಷೆಗೆ ಬಂದಿರಲಿಲ್ಲ, ಸೆಂಟರ್ ಕ್ಯಾನ್ಸಲ್ ಆಗಿತ್ತು ಮಾನ್ಯ.... ... ... ರವರೇ ಪುನಃ ಸ್ಯಾಂಕ್ಷನ್ ಮಾಡಿಸಿಕೊಂಡು ಬಂದಿದ್ದಾರೆ.

ಇಡೀ ಊರಿನ ವಾತಾವರಣವೇ ಪರೀಕ್ಷೆಗೆ ಸಜ್ಜಾಗುತ್ತಿದೆ. ಈ ಸೆಂಟರಿಗೆ ಬರುವ ಶಾಲೆಗಳ ಹಳೆಯ ವಿದ್ಯಾರ್ಥಿಗಳು ಇಲ್ಲಿ ಬೀಡು ಬಿಟ್ಟು ನಾಲ್ಕು ದಿನವಾಯಿತು, ಬಾಲಕೆಯರಿಗೆಲ್ಲಾ ಪಾಕೆಟ್ ಗೈಡುಗಳ ಪುಕ್ಕಟ್ ಸರಬರಾಜು, ಯಾವ ವಿಧ್ಯಾರ್ಥಿಗಳೂ ಓದುತ್ತಿಲ್ಲ. ಅತೀವ ಆತ್ಮ ವಿಶ್ವಾಸ ಹೊಂದಿದ್ದಾರೆ,

ಈ ಹಳೆಯ ವಿದ್ಯಾರ್ಥಿಗಳೆಲ್ಲಾ ಗೀತಾ ಪಾರಾಯಣಕ್ಕಾಗಿ ನನ್ನ ಕೋಣೆಯ ಹಿಂದಿನ ಮಾವಿನ ತೋಪನ್ನೇ ಆಶ್ರಯಿಸುತ್ತಾರೆ. ಅವರನ್ನು ಓಡಿಸಲು ನನಗೆ ಹಕ್ಕಿಲ್ಲ,

ಈ ದಿನ ಏಕೋ ಏನೋ ಅನ್ಸರ್ ಪೇಪರ್ ಬಂಡಲು ಬಿಚ್ಚಿತ್ತು, ಯಾರು ಏಕೆ ಹೇಗೆ ತಿಳಿಯಲಿಲ್ಲ,

ನಿನ್ನ ಸ್ಮರಣೆಗಾಗಿ ಕಾತರಿಸುತ್ತಿರುವ

ನಿನ್ನ

ವಿ. ವೀ.

ಪ್ರಿಯ,

ನಿನ್ನ ರೂಪು ನನ್ನ ಕಣ್ಣಲ್ಲಿ ತುಂಬಿದೆ. ನನ್ನ ಹೃದಯದಲ್ಲಿ ನೀನು ನೆಲೆ ನಿಂತಿರುವೆ. ನಿನ್ನ ಮಾತುಗಳು ನನ್ನ ಕಿವಿಯಲ್ಲಿ ಅನುರಣನ ಮಾಡುತ್ತಿವೆ, ನೀನೆತ್ತಲೋ ಹೋದೆ. ನನಗೆ ಒಂದು ದಿನ ಒಂದು ಸಹಸ್ರ ವರ್ಷಗಳು. ನಿನ್ನ ಕಾಗದಕ್ಕಾಗಿ ಕಾತರಿಸುತ್ತಿದ್ದೇನೆ,

ನಿನ್ನ

ಹೃ. ಮೋ.

ಚಿರಂಜೀವಿಗೆ ಆಶೀರ್ವಾದಗಳು,

ನೀನು ಹೋಗಿರುವ ಊರು ಇಡೀ ರಾಜ ದಲ್ಲೇ ಕುಪ್ರಸಿದ್ಧ ಕೇಂದ್ರ, ಹುಲಿಗರಡಿ, ಮೇಲುಪಾಲು, ಕಾಕನಕೋಟೆ, ವಾಟದ ಹೊಸಹಳ್ಳಿ, ಚೌಳಹಿರಿಯೂರು, ಕೆರ್ಜಾಡಿ, ಎಳಜಿತ, ಶಿರಾಲಿಗಳಂಥ ದೂರದೂರದ ಊರುಗಳ ಹಳೆ ಹುಲಿಗಳು ನಿಮ್ಮ ಸೆಂಟರಿನಲ್ಲಿ ಪರೀಕ್ಷಾರ್ಥಿಗಳಂತೆ.

ಮಗೂ,

ಘಟವಿದ್ದರೆ ಮಠ ಕಟ್ಟಬಹುದು.

ಗಂಡಂದಿರಿಗೆ—ಸಲಹೆಗಳು

—ನಂದಕಿಶೋರ

ಈಗಿನ ನಗರ ಜೀವನದಲ್ಲಿ ಬೆಳಗಿನಿಂದ ಸಂಜೆಯವರೆಗೂ. ಅನೇಕ ವಿಧವಾದ ತೊಳಲಾಟಗಳು. ಅನೇಕ ದಿಕ್ಕುಗಳಲ್ಲಿ ಎಳೆಯುತ್ತಿದ್ದರೂ, ಮೀಸೆ ಹೊತ್ತ ತಪ್ಪಿಗೆ, ಮುಗುಳ್ನಗುವಿನ ಮುಖಾರವಿಂದವನ್ನು ಬೆಳಗಿನ ಹೊತ್ತು ಆಫೀಸಿನಲ್ಲಿ, ಸಂಜೆ ಮನೆ ಹೆಂಡತಿ ಮುಂದೆ ತೋರಿಸಬೇಕಾಗುವಂಥ ಗಂಡಂದಿರ ಬಗ್ಗೆ ಸಹಾನುಭೂತಿ ಉಕ್ಕಿ ಅವರಿಗೋಸ್ಕರ ಕೆಲವು ಸಲಹೆಗಳನ್ನು ನಿಮ್ಮ ಮುಂದಿಟ್ಟಿದ್ದೇನೆ. ಮನೆ ಹೆಂಡ್ತಿ ಮುಂದೆ ಮುಚ್ಚು ಮರೆ ಏನು ? ಮುಗುಳ್ನಗೆಯ ಮುಖವಾಡ ಏಕೆ ? ಎಂದು ಕೇಳುವ ಅದೃಷ್ಟಶಾಲಿಗಳಿಗಲ್ಲ ಈ ಲೇಖನ. ಮನೆಯ ಯಜಮಾನ ಎಂಬ ಒಂದು ಕಾಲ್ಪನಿಕ ಬಿರುದನ್ನು. ನಿಜವೆಂದು ತೋರಿಸ ಹೋಗಿ, ಪ್ರತಿ ಹೆಜ್ಜೆಗೂ ಎಡವುತ್ತಿರುವ. ಮೆಜಾರಿಟಿ ಗಂಡಂದಿರಿಗೋಸ್ಕರ ಈ ಸಲಹೆಗಳು.

ಮೊದಲನೆಯ ಸಲಹೆ : ಸತ್ಯವನ್ನು ಧೈರ್ಯದಿಂದ ಎದುರಿಸಿ,

ಕ್ಷುಲ್ಲಕ ವ್ಯಾಕರಣ ಬಲದಿಂದ. ಯಜಮಾನ ಎಂದರೆ ಪುಲ್ಲಿಂಗ ಎಂಬ ಭ್ರಮೆಗೆ ಈಡಾಗದೇ, ಯಜಮಾನಿಕೆ ಯಾರಲ್ಲಿದೆಯೋ, ಅವರಿಗೆ ಆ ಪಟ್ಟವನ್ನು ನಿಮ್ಮ ಮನಸ್ಸಿನಲ್ಲಿ ಖಾತ್ರಿ ಮಾಡಿಕೊಳ್ಳಿ. ಆ ಯಜಮಾನ ನಿಮ್ಮ ಪತ್ನಿಯಾಗಿರಬಹುದು ನಿಮ್ಮ ತಾಯಿ ಆಗಿರಬಹುದು ಅಥವಾ ನಿಮ್ಮ ಟೀನ್ಏಜ್ ಕುವರಿಯೇ ಆಗಿರಬಹುದು, ಒಂದು ಪಕ್ಷ ನೀವೇ ಯಜಮಾನರಾಗಿದ್ದರೆ, ಈ ಬರಹವನ್ನು ಮುಂದೆ ಓದುವುದು ವ್ಯಥಾ ಕಾಲಹರಣ.

ಎರಡನೆಯ ಸಲಹೆ : ಚತುರತೆಯ ಪ್ರಯೋಗಕ್ಕೆ ಕಾಲ. ದೇಶಗಳ ಮಿತಿ ಇಲ್ಲ.

ನಿಮಗೇ ತಿಳಿದಿರುವ ಹಾಗೆ ನಿಮ್ಮ ಆಫೀಸಿನಲ್ಲಿ ನೀವೊಬ್ಬ ಜವಾಬ್ದಾರಿಯುತ ಚಾಣಾಕ್ಷ ಆಫೀಸರ್ ಆಗಿರುವುದೇ ನಿಮ್ಮ ಚತುರತೆಗೆ ಸಾಕ್ಷಿ. ಈ ಚತುರತೆಯನ್ನು ಮನೆ ಸೇರಿದೊಡನೆಯೇ ಮೂಲೆಗಿಡಬೇಕೆಂದು ಯಾವ ಮನು ಧರ್ಮಶಾಸ್ತ್ರದಲ್ಲಿ ಹೇಳಿದೆ ? ಮನೆಯಲ್ಲೂ ಅದೇ ಚತುರತೆಯನ್ನು ಪ್ರಯೋಗಿಸಿ. ನಿಮ್ಮ ಮೇಲಿನ ಆಫೀಸರ ಹತ್ತಿರ ಮಾತನಾಡುವಾಗ ಅವರನ್ನು ನಿಮಗೆ ಬೇಕಾದಂತೆ ನಿಮ್ಮ ದಾರಿಗೆ ತಿರುಗಿಸುಲ್ಲವೇ. ಅದೇ ರೀತಿ, ಉದಾಹರಣೆಗೆ, ನಿಮ್ಮ 'ಧರ್ಮಪತ್ನಿ'ಯೇ

'ಯಜಮಾನ'ರೆಂದಿಟ್ಟುಕೊಳ್ಳಿ. ಊರಿನಲ್ಲಿ ಒಂದು ಒಳ್ಳೇ ನಾಟಕ "ಸಂಸಾರದಲ್ಲಿ ಸರಿಗಮ" ಬಂದಿದೆ, ನಿಮಗೆ ಆ ದಿನ ಸಾಯಂಕಾಲವೇ ಅದನ್ನು ನೋಡಲು ಆಸೆ. ಮೊದಲಾಗಿದ್ದಿದ್ದರೆ ನೀವೇನು ಮಾಡುತ್ತಿದ್ದಿರಿ ? "ಲೇ ! ಇವತ್ತು ಸಾಯಂಕಾಲ ಬೇಗ ಬರುತ್ತೇನೆ ರೆಡಿಯಾಗಿರು, ನಾಟಕಕ್ಕೆ ಹೋಗಬೇಕು" ಎಂದು ಥೇಟ್ ಯಜಮಾನನ ತರಹ ಗುಟುರು ಹಾಕುತ್ತಿದ್ದಿರಿ, ಅದಕ್ಕೆ ನಿಮ್ಮ ಧರ್ಮಪತ್ನಿಯ ಉತ್ತರ "ಇವತ್ತು ಸಾಯಂಕಾಲವೇ ? ಏನಾಗಿದೇರೀ ನಿಮಗೆ ? ಸಂಜೆಗೆ ನಾಲ್ಕು ಮನೆ ಅರಿಸಿನ ಕುಂಕುಮಕ್ಕೆ ಕರೆದಿದ್ದೇನೆ ! ಇವತ್ತು ಪೇಟೆಗೆ ಹೋಗಿ ನಿನ್ನೆ ಕೊಂಡ ಸೀರೆಗೆ ಮ್ಯಾಚಿಂಗ್ Blouse Piece ತರಬೇಕು ! ರೇಷನ್ ಸಾಮಾನುಗಳನ್ನೆಲ್ಲಾ ಇವತ್ತೇ ತಂದುಬಿಡಬೇಕು ! (ಯಾವುದಾದರೊಂದನ್ನು ಆರಿಸಿ) ಎಲ್ಲಾ ಬಿಟ್ಟು ನಾಟಕ ಅಂತೆ ನಾಟಕ"

ಆಯಿತಲ್ಲಾ ನಿಮ್ಮ ನಾಟಕ ವೀಕ್ಷಣೆ.

ಈಗ ನೋಡಿ ನಿಮ್ಮ ಆಫೀಸ್ ಚತುರತೆಯ ಪ್ರಯೋಗ.

ಒಂದು ದಿನ ಮುಂಚೆಯೇ ಲೋಕಾಭಿರಾಮವಾಗಿ ಮಾತು ನಾಟಕದ ಕಡೆ ಹೊರಳಬೇಕು. "ಏನೋ ಹಾಸ್ಯ ನಾಟಕ ಅಂತೆ. ಬರೀ ನವ ದಂಪತಿಗಳ ಸಂಸಾರಕ್ಕೆ ಸಂಬಂಧದಟ್ಟಿದ್ದು. ಬರೀ ಚಿಕ್ಕ ಮಕ್ಕಳಾಟ. ಆಫೀಸಿನಿಂದ ಬರ್‍ತಾ ನೋಡ್ದೆ, ಎಷ್ಟು ಜನ ಯುವ ದಂಪತಿಗಳೂ ಅಂತ. ನನಗಂತೂ ಬಹಾಳ ಆಶ್ಚರ್ಯ. ಏನಿದೆಯೋ ಆ ನಾಟಕದಲ್ಲಿ" ಅಂತ ಹಗೂರಾಗಿ ಒಂದು ಬಲೂನ್ ತೇಲಿ ಬಿಡಿ. ಮಾರನೆ ದಿನ ತಾನಾಗೇ ಬರುತ್ತೆ "ಈವತ್ತು ನಾಟಕಕ್ಕೆ ಹೋಗೋಣೇನ್ರಿ ?" ನೀವು ಆಗ ನಕಲಿ ಯಜಮಾನನಂತೆ "ಆಗಲಿ ಕಣೆ ಅದಕ್ಕೇನು ? ಸಂಜೆಗೆ ರೆಡಿಯಾಗಿರು" ಎಂದು ಮುಗಳ್ನಗೆಯಿಂದ ಆಫೀಸಿಗೆ ಹೊರಡಬಹುದು,

ಮೂರನೆಯ ಸಲಹೆ : ಪರೋಪಕಾರಾರ್ಥಮಿದಂ ಶರೀರಂ.

ಎರಡನೇ ಸಲಹೆಯಲ್ಲಿನ ಚತುರತೆ ಸಾಮಾನ್ಯವಾದ ದಿನವಹಿ ಚಟುವಟಿಕೆಗಳಿಗೆ ಒಳ್ಳೆಯ ಮಾರ್ಗವಾದರೂ, ಕೆಲವು ಮುಖ್ಯ ಸಂಗತಿಗಳಿಗೆ ಉದಾಹರಣೆ. ನೀವು ಸೂಟ್ ಹೊಲಿಸಿಕೊಳ್ಳುವುದು, ಅಡಿಗೆ ಮನೆಗೆ Water Filter ತರುವುದು, ಇಂತಹ ವಿಷಯಗಳಲ್ಲಿ ನಿಮ್ಮ ಆಟ ಏನೂ ನಡೆಯುವುದಿಲ್ಲ. ಹಾಗೆಂದು ನಿರಾಶರಾಗಿ ಕುಳಿತರೆ ಆಯಿತೇ. ಖಂಡಿತಾ ಇಲ್ಲ.

ಗೀತೆಯಲ್ಲಿ ಶ್ರೀ ಕೃಷ್ಣ ಹೇಳಿದಂತೆ. ನಾನು ಮಾಡುವುದು ಏನೂ ಇಲ್ಲ. ಎಲ್ಲಾ ಆತ (ಕೆ) ಮಾಡಿಸುತ್ತಾನೆ(ಳೆ) ಎಂದು ಧೃಢವಾಗಿ ನಂಬಿ ಸ್ವಾರ್ಥ ತ್ಯಾಗವೇ ನಮ್ಮ ಪವಿತ್ರ ಭರತ ಭೂಮಿಯ ಮೂಲ ಮಂತ್ರ ಎಂಬುದನ್ನು ನೆನಪಿನಲ್ಲಿಡಿ. ಆಗ ನಿಮ್ಮ 'ಯಜಮಾನರ ಆಜ್ಞೆ' ಅಷ್ಟು ಕಹಿಯಾಗಿ ಕಾಣುವುದಿಲ್ಲ.

ಈ ಮೇಲಿನ ಸಲಹೆಗಳಿಲ್ಲದರಿಂದ ನಿಮ್ಮ ಪ್ರಸ್ತುತ ಜೀವನ ಕ್ರಮ ಸುಧಾರಿಸದಿದ್ದರೆ, ನಿಮ್ಮದು ಬಹಳ ಸೀರಿಯಸ್ ಕೇಸು. ನನಗೆ ತಿಳಿದಂತೆ ಲಕ್ನೋದಲ್ಲಿ ಈಚೆಗೆ ಕೋಳೀ ಕುಕ್ಕ ಗಂಡಂದಿರ ಒಕ್ಕೂಟ (Hen-pecked Husbands' Association) ಒಂದನ್ನುಶುರು ಮಾಡಿದ್ದಾರೆ. ಅಲ್ಲಿನ ಕಾರ್ಯದರ್ಶಿಗಳನ್ನೊಮ್ಮೆ ನೋಡುವುದು ಒಳಿತು. ಒಂದು ವೇಳೆ ನೀವೇನಾದ್ರು ಲಕ್ನೋಗೆ ಹೋಗೋದಾದ್ರೆ ನನಗೂ ಒಂದು ಟಿಕೇಟ್ ಕಾದಿಡೋದು ಮಾತ್ರ ಮರೆಯಬೇಡಿ,

Name of Publication APARANJI

Publisher M. SHIVA KUMAR

Printer : V. R. NATH


Owner M. SHIV KUMAR

Published in Impression Press, Sampige Road
Malleswaram Bangalore-3

Place of Publication : Bangalore

October 1985
Bangalore

ಶುಭಾಶಯಗಳೊಂದಿಗೆ



—ಹಿತೈಷಿ

ಶುಭಾಶಯಗಳೊಂದಿಗೆ

ಬಿ. ಎಸ್ ವಿಜಯೇಂದ್ರ ಅಸೋಸಿಯೇಟ್ಸ್

281, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು–560 010

ಶುಭಾಶಯಗಳೊಂದಿಗೆ

ಟೆಕ್ನೊಲಿಂಕ್ ಎಂಟರ್‌ಪ್ರೈಸಸ್

ನಂ. 35, 5ನೇ ಕ್ರಾಸ್ 1ನೇ ಮೇನ್, ಎಸ್. ಕೆ. ಗಾರ್ಡನ್
ಬೆನ್‌ಸನ್ ಟೌನ್, ಬೆಂಗಳೂರು–560 046

ಶುಭಾಶಯಗಳೊಂದಿಗೆ

ಎಕ್ಸಲ್ ಟೂಲ್ಸ್ ಎಂಡ್ ಇಂಜಿನೀರಿಂಗ್ ಎಂಟರ್‌ಪ್ರೈಸಸ್

ಬಿ–20, 1ನೇ ಕ್ರಾಸ್, 1ನೇ ಸ್ಟೇಜ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು–560 058.



No. 23 AL 84-NT III